# ಹೊಳೆನರಸೀಪುರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯದಲ್ಲಿ

ಉಪಸ್ಥಿತರುಃ- ಶ್ರೀ ಆರ್. ಮಹೇಶ್, ಬಿ.ಎ.ಎಲ್., ಎಲ್‌ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಹೊಳೆನರಸೀಪುರ.

ದಿನಾಂಕ **17**ನೇ ಜೂನ್ ಮಾಹೆ 2019

**ಒ.ಎಸ್.ನಂ.203/2013**

ವಾದಿಗಳು ಃ- 1. ಮಂಜುಳ ಕೋಂ ಪಿ.ಜಿ.ಮಲ್ಲಿಕಾರ್ಜುನ,
ಸುಮಾರು 48 ವರ್ಷ,
ಅರಸನ ತೋಟ, ಮಾತೊಡ್ ಅಂಚೆ,
ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ,

2 ಲತಾ ಕೋಂ ಲೋಕೇಶ,
ಸುಮಾರು 44 ವರ್ಷ,

3. ರಶ್ಮಿ ಬಿನ್ ಲೋಕೇಶ,
ಸುಮಾರು 23 ವರ್ಷ,

4. ರಮ್ಯ ಬಿನ್ ಲೋಕೇಶ,
ಸುಮಾರು 17 ವರ್ಷ, ಮೈನರ್ ಆಗಿದ್ದು,
ಇವರ ಖಾಸಾ ತಾಯಿ ಗಾರ್ಡಿಯನ್ ಆಗಿ
ಪ್ರತಿನಿಧಿಸುತ್ತಾರೆ.

ವಾದಿಗಳು 2 ರಿಂದ 4ರವರು
ಲಕ್ಷ್ಮಿವೆಂಕಟೇಶ್ವರ ನಿಲಯ, ಸಿ ಬ್ಲಾಕ್, 318,
ಗೋಪಾಲಗೌಡ ಬಡವಾಣೆ, ಶಿವಮೊಗ್ಗ.

**(ಪರ ವಕೀಲರುಃ ಶ್ರೀ ಎ.ಎಸ್.)**

ಃವಿರುದ್ಧಃ

ಪ್ರತಿವಾದಿಯರು ಃ- 1. ಯಜೇಂದ್ರಕುಮಾರ ಬಿನ್ ಸಿದ್ದರಾಮಯ್ಯ ಉಃ ರಾಜಣ್ಣ,
**ಇವರು ಮೃತ ಪಟ್ಟಿದ್ದು ಕಾನೂನುಬದ್ದ ವಾರಸುದಾರರು**

1ಎ. ಕಾಂತಮಣಿ ಉಃ ಕಾಂತಮ್ಮ,
ಸುಮಾರು 45 ವರ್ಷ,
ಕೋಂ ವಿಜಯೇಂದ್ರ ಕುಮಾರ,
ಒಡೆಯರ ಕೊಪ್ಪಲು, ವಾರ್ಡ್ ನಂ.13,
ಹೊಳೆನರಸೀಪುರ ಟೌನ್.

1ಬಿ. ಅರುಣ್‌ಕುಮಾರ ಎ ಬಿನ್ ವಿಜಯೇಂದ್ರ ಕುಮಾರ,
ಸುಮಾರು 23 ವರ್ಷ,
ಒಡೆಯರ ಕೊಪ್ಪಲು, ವಾರ್ಡ್ ನಂ.13,
ಹೊಳೆನರಸೀಪುರ ಟೌನ್.

1ಸಿ. ಅರ್ಪಿತ ಬಿನ್ ವಿಜಯೇಂದ್ರಕುಮಾರ,
ಸುಮಾರು 24 ವರ್ಷ,
ಒಡೆಯರ ಕೊಪ್ಪಲು, ವಾರ್ಡ್ ನಂ.13,
ಹೊಳೆನರಸೀಪುರ ಟೌನ್.

2. ಶಾರದ ಕೋಂ ನಂಜಪ್ಪ,
ಸುಮಾರು 43 ವರ್ಷ,
ಒಡೆಯರ ಕೊಪ್ಪಲು, ವಾರ್ಡ್ ನಂ.13,
ಹೊಳೆನರಸೀಪುರ ಟೌನ್.

3. ಮಹೇಂದ್ರಕುಮಾರ ಬಿನ್ ಸಿದ್ದರಾಮಯ್ಯ ಉಃ ರಾಜಣ್ಣ,
ಸುಮಾರು 40 ವರ್ಷ,
ನಂ.2/1, 2ನೇ ಹಂತ, ರಾಧಕೃಷ್ಣನ್ ನಿವಾಸ,
9ನೇ ಮುಖ್ಯ ರಸ್ತೆ, ಪ್ಯಾಲೆಸ್ ಗುಟ್ಟಹಳ್ಳಿ, ಬೆಂಗಳೂರು,

**(ಪ್ರತಿವಾದಿಗಳ ಪರ ಃ ಶ್ರೀ ಕೆ.ಕೆ.ಆರ್ ವಕೀಲರು,)**

1) ದಾವೆ ದಾಖಲಾದ ದಿನಾಂಕ 19/07/2013

| | |
|---|---|
| 2) ದಾವೆಯ ಸ್ವರೂಪ | ಘೋಷಣಾತ್ಮಕ ಮತ್ತು ವಿಭಾಗದ ದಾವೆ, |
| 3) ವಿಚಾರಣೆ ಪ್ರಾರಂಭವಾದ ದಿನಾಂಕ | 16/12/2014 |
| 3) ತೀರ್ಪು ಪ್ರಕಟಿಸಿದ ದಿನಾಂಕ | 17/06/2019 |
| 3) ಒಟ್ಟು ಅವಧಿ | ವರ್ಷಗಳು 05 ತಿಂಗಳು 10 ದಿನಗಳು 28 |

## ಃ ತೀರ್ಪು ಃಃ

ಈ ಪ್ರಸ್ತುತ ದಾವೆಯನ್ನು ವಾದಿಗಳು ಪ್ರತಿವಾದಿಗಳ ವಿರುದ್ದ ಹಿಸ್ಸೆ ಪರಿಹಾರ ಹಾಗೂ 3ನೇ ಪ್ರತಿವಾದಿಯು 1ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಕ್ರಯಪತ್ರ ವಾದಿಗಳ ಹಕ್ಕಿಗೆ ಬದ್ಧಪಡಿಸುವುದಿಲ್ಲ ಎಂದು ಘೋಷಿಸಬೇಕಾಗಿ ಹಾಗೂ ಇನ್ನಿತರ ನ್ಯಾಯೋಚಿತ ಪರಿಹಾರಗಳನ್ನು ಕೋರಿ ಈ ದಾವೆಯನ್ನು ಸಲ್ಲಿಸಿದ್ದಾರೆ.

2. **<u>ವಾದ ಪತ್ರದ ಸಂಕ್ಷಿಪ್ತ ಸಾರಾಂಶವೇನೆಂದರೆ.</u>**

ವಾದಿ ಮತ್ತು ಪ್ರತಿವಾದಿಗಳ ರಕ್ತ ಸಂಬಂಧವನ್ನು ಅರ್ಥಮಾಡಿಕೊಳ್ಳಲು ರೇಖಾ ನಕ್ಷೆ ಹಾಕಿಕೊಳ್ಳಲಾಗಿದೆ.

**ಸಿದ್ದರಾಮಯ್ಯ ಉಃ ರಾಜಣ್ಣ (ಮೂಲಪುರುಷ)**

1ನೇ ಹೆಂಡತಿ ಶಾರದಮ್ಮ (ಮೃತ ಹೊಂದಿರುತ್ತಾರೆ) 2ನೇ ಹೆಂಡತಿ ಸರೋಜಮ್ಮ

ಮಂಜುಳ**(ವಾದಿ-1)** ಲೋಕೇಶ ಮರಣ ಹೊಂದಿದ್ದು ಅವರ ವಾರಸುದಾರರು ವಿಜಯೇಂದ್ರಕುಮಾರ **(ಪ್ರ-1)** ಶಾರದ **(ಪ್ರ-2)** ಮಹೇಂದ್ರಕುಮಾರ **(ಪ್ರ-3)**

ಶ್ರೀಮತಿ ಲತಾ ಕೋಂ ಲೋಕೇಶ, (ವಾದಿ -2)
ಮೃತ ಲೋಕೇಶನ ಮಕ್ಕಳು

ರಶ್ಮಿ ಬಿನ್ ಲೋಕೇಶ **(ವಾದಿ 3),** ರಮ್ಯ ಬಿನ್ ಲೋಕೇಶ **(ವಾದಿ -4)**

ದಾವಾ ಷೆಡ್ಯೂಲ್ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಜಂಟಿ ಮತ್ತು ಪಿತ್ರಾರ್ಜಿತ ಹಿಂದೂ ಅವಿಭಕ್ತ ಕುಟುಂಬದ ಆಸ್ತಿಗಳಾಗಿದ್ದು, ವಾದಿಗಳು ಆ ಸ್ವತ್ತಿನ ಜಂಟಿ ಸ್ವಾದೀನಾನುಭವ ಹೊಂದಿದ್ದಾರೆ. ಪ್ರತಿವಾದಿಗಳು ಮೂಲಪುರುಷ ಸಿದ್ದರಾಮಯ್ಯ ಉಃ ರಾಜಣ್ಣರವರ ಕಾನೂನುಬದ್ದ ಮಕ್ಕಳುಗಳಾಗಿರುವುದಿಲ್ಲ. ಪ್ರತಿವಾದಿಗಳು ಪರಸ್ಪರ ಒಬ್ಬರಿಗೊಬ್ಬರು ಶಾಮೀಲಾಗಿ ಕಂದಾಯ ಅಧಿಕಾರಿಗಳನ್ನು ತಮ್ಮ ಪರ ಮಾಡಿಕೊಂಡು ದಾವಾ ಷೆಡ್ಯೂಲ್ ಸ್ವತ್ತುಗಳ ಖಾತೆಯನ್ನು ಪ್ರತಿವಾದಿಗಳ ಹೆಸರಿಗೆ ಮಾಡಿಕೊಂಡಿರುತ್ತಾರೆ. 1 ಮತ್ತು 2ನೇ ಪ್ರತಿವಾದಿಗಳಿಗೆ ಖಾತೆ ಬದಲಾವಣೆ ಮಾಡಿಕೊಂಡ ವಿಚಾರ ತಿಳಿದ ಕೊಡಲೇ ವಿಭಾಗ ದಾವೆ ದಾಖಲಿಸಿದ್ದಾರೆ. 3ನೇ ಪ್ರತಿವಾದಿಯು ಖಾತೆಯನ್ನು ತನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡು, 1ನೇ ಪ್ರತಿವಾದಿಯ ಹೆಸರಿಗೆ ಮಾರಾಟ ಮಾಡಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ನಡುವೆ ಕಾನೂನುಬದ್ದ ವಿಭಾಗ ಆಗದೇ ವಾದಿಗಳ ಹಿತಾಸಕ್ತಿಯನ್ನು ಕಡೆಗಣಿಸಿ ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತುಗಳ ಖಾತೆಯನ್ನು ವರ್ಗಾವಣೆ ಮಾಡಿಕೊಂಡು ಮಾರಾಟ ಮಾಡಿರುವುದರಿಂದ ವಾದಿಗಳು ಹೊಂದಿರುವ ಕಾನೂನುಬದ್ದ ಹಿಸ್ಸೆ ಹಕ್ಕನ್ನು ಪ್ರತ್ಯೇಕಿಸಿ ಸ್ವಾದೀನ ಕೊಡಿಸಬೇಕಾಗಿ ಈ ದಾವೆಯನ್ನು ಸಲ್ಲಿಸಿದ್ದಾರೆ.

3. ಈ ನ್ಯಾಯಾಲಯದಿಂದ ಈ ದಾವೆಯ ಸಮನ್ಸ್‌ನ್ನು ಪ್ರತಿವಾದಿಗಳಿಗೆ ಕಳುಹಿಸಿದ್ದು, ಪ್ರತಿವಾದಿ 1 ರಿಂದ 3ರವರು ತಮ್ಮ ವಕೀಲರ ಮೂಲಕ ಹಾಜರಾಗಿದ್ದು, 1ನೇ ಪ್ರತಿವಾದಿ ತಮ್ಮ ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. 2ನೇ ಪ್ರತಿವಾದಿಯ 1ನೇ ಪ್ರತಿವಾದ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ತಾನು ಅಳವಡಿಸಿಕೊಳ್ಳುವುದಾಗಿ ಮೆಮೋ ಸಲ್ಲಿಸಿ ಸದರಿ ಪ್ರತಿವಾದ ಪತ್ರವನ್ನು 2ನೇ ಪ್ರತಿವಾದಿಯ ಅಳವಡಿಸಿಕೊಂಡಿರುತ್ತಾರೆ. 3ನೇ ಪ್ರತಿವಾದಿ ಪರ ವಕೀಲರಿಗೆ ನ್ಯಾಯಾಲಯ ಸಾಕಷ್ಟು ಕಾಲಾವಕಾಶ ನೀಡಿದ್ದರೂ ಪ್ರತಿವಾದ ಪತ್ರ ಸಲ್ಲಿಸದ ಕಾರಣ 3ನೇ ಪ್ರತಿವಾದಿ ಪರ ಪ್ರತಿವಾದ ಪತ್ರವನ್ನ ಇಲ್ಲ ಎಂದು ತೆಗೆದುಕೊಂಡಿರುತ್ತದೆ.

4. **1 ಮತ್ತು 2ನೇ ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಪ್ರತಿವಾದ ಪತ್ರದ ಸಂಕ್ಷಿಪ್ತ ಸಾರಾಂಶವೆನೆಂದರೆ.**

ತಮ್ಮ ಲಿಖಿತ ಪ್ರತಿವಾದ ಪತ್ರದಲ್ಲಿ ವಾದಿಯು ಸಲ್ಲಿಸಿರುವ ದಾವೆಯು ಕಾನೂನು ಮತ್ತು ವಸ್ತು ಸ್ಥಿತಿಗಳ ಹಿನ್ನೆಲೆಯಲ್ಲಿ ಊರ್ಜಿತವಾಗತಕ್ಕದ್ದಲ್ಲ. 1ನೇ ಪ್ರತಿವಾದಿಯು ವಾದ ಪತ್ರದ ಖಂಡಿಕೆ 2 ರಲ್ಲಿ ಹೇಳಿರುವ ಸಂಗತಿಗಳು ಸರಿಯಾಗಿವೆ ಎಂದು ಒಪ್ಪಿರುತ್ತಾರೆ. ವಾದ ಪತ್ರದ 3ನೇ ಕಂಡಿಕೆಯಲ್ಲಿ ಹೇಳಿರುವ ದಾವಾ ಷೆಡ್ಯೂಲ್ ಆಸ್ತಿಗಳು ಪಿತ್ರಾರ್ಜಿತವಾದ ಮತ್ತು ಒಟ್ಟು ಕುಟುಂಬದ ಆಸ್ತಿಗಳಾಗಿದ್ದವು ಎಂಬುದನ್ನು ಒಪ್ಪಿರುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಗಳು ಪ್ರಸುತ್ತ ಒಟ್ಟು ಕುಟುಂಬದಲ್ಲಿ ಇಲ್ಲ ಎಂದು ನಿರಾಕರಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ತಂದೆ ಸಿದ್ದರಾಮಯ್ಯ ಉಃ ರಾಜಣ್ಣನವರು ಬದುಕಿದ್ದಾಗಲೇ ದಿನಾಂಕ-04-06-2004ರಂದು ಪಂಚಾಯತ್ ಪಾಲುಪಾರಿಕತ್ಮೂಲಕ ವಿಭಾಗ ಮಾಡಿಕೊಂಡು ಅವರವರ ಹಿಸ್ಸೆಯಂತೆ ಬೆಳೆಗಳನ್ನು ಮಾಡಿಕೊಂಡು ಶಾಂತಿಯುತ ಸ್ವಾದೀನಾನುಭ ಹೊಂದಿರುವುದಾಗಿ ಸ್ಪಷ್ಟ ಪ್ರತಿರಕ್ಷಣೆ ತೆಗೆದುಕೊಂಡಿರುತ್ತಾರೆ. ವಾದ ಪತ್ರದ 4ನೇ ಕಂಡಿಕೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳೆಂದು ನಿರಾಕರಿಸಿ ದಿನಾಂಕ 04-06-2004ರಂದು ಆದ ಪಂಚಾಯತ್ ಪಾಲುಪಾರಿಕತ್ ಪ್ರಕಾರ ಸಿದ್ದರಾಮಯ್ಯನವರ ಮೊದಲನೆ ಹೆಂಡತಿ ಮತ್ತು 2ನೇ ಹೆಂಡತಿ ಮಕ್ಕಳುಗಳ ನಡುವೆ ವಿಭಾಗ ಆಗಿದ್ದು, ಮೊದಲನೇ ಹೆಂಡತಿ ಶಾರದಮ್ಮನವರ ಮಗ ಲೋಕೇಶ 2ನೇ ಹೆಂಡತಿಯ ಮಗ ವಿಜಯೇಂದ್ರರವರಿಗೆ ಸರ್ವೆ ನಂ.120/1ಎನಲ್ಲಿ 1 ಎಕರೆ 07 ಗುಂಟೆ ಪೈಕಿ 16 ಗುಂಟೆ ಸರ್ವೆ ನಂ.74/2ಬಿ 24 ಪೈಕಿ 5 ಗುಂಟೆ, ನಿವೇಶನ 4000 ದಲ್ಲಿ 37 X 53 ಅಡಿ ಪೈಕಿ 24 X 47 ಅಡಿ ಜಾಗವನ್ನು 1,42,000/- ರೂಗಳಿಗೆ ವಿಜಯೇಂದ್ರ ಕುಮಾರರವರಿಗೆ ಮಾರಾಟ ಮಾಡಿ ಮಾರಾಟ ಹಣವನ್ನು ಪಡೆದು ದಿನಾಂಕ 03-08-2001ರಂದು ಒಂದು ಕರಾರು ಪತ್ರವನ್ನು 1ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ. 1ನೇ ಪ್ರತಿವಾದಿಯು ಆ ಸ್ವತ್ತುಗಳನ್ನು ಖಾತೆ ಮಾಡಿಸಿಕೊಂಡು ಹಕ್ಕು ಸ್ವಾದೀನಾನುಭವ ಹೊಂದಿ ಅದರಲ್ಲಿ ಕಾಲಕಾಲಕ್ಕೆ ಬೆಳೆಗಳನ್ನು ಬೆಳೆದು ಸರ್ಕಾರಕ್ಕೆ ಕಂದಾಯ ವಗೈರೆಗಳನ್ನು ಪಾವತಿಸುತ್ತಾ ಸ್ವಾದೀನಾನುಭವ ಹೊಂದಿದ್ದಾರೆ. ಈ ಎಲ್ಲಾ ಸಂಗತಿಗಳು ಕುಟುಂಬದ ಸಮಸ್ತ ಬಂದುಬಾಂದವರಿಗೂ ಊರಿನ ಗ್ರಾಮಸ್ಥರಿಗೂ ತಿಳಿದಿರುತ್ತದೆ. 3ನೇ ಪ್ರತಿವಾದಿ ಹೆಸರಿಗೆ ಬಂದ ಪಾಲಿನಲ್ಲಿ ದಾವಾ ಐಟಂ 4ರ ಸರ್ವೆ ನಂ.120/1ಎ ರಲ್ಲಿ 3ನೇ ಪ್ರತಿವಾದಿಯ ಹಿಸ್ಸೆ ಹಕ್ಕನ್ನು 1ನೇ ಪ್ರತಿವಾದಿಗೆ ಶುದ್ದ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ. 3ನೇ ಪ್ರತಿವಾದಿಗೆ ತನ್ನ ಹಿಸ್ಸೆ ಹಕ್ಕನ್ನು

1ನೇ ಪ್ರತಿವಾದಿಗೆ ಕಾನೂನುಬದ್ದವಾಗಿ ಮಾರಾಟ ಮಾಡಿರುವುದರಿಂದ ಅದನ್ನು ಪ್ರಶ್ನಿಸುವ ಹಕ್ಕು ವಾದಿಗಳಿಗೆ ಇರುವುದಿಲ್ಲ. ಕುಟುಂಬದ ಮೂಲ ಪುರುಷ ಸಿದ್ದರಾಮಯ್ಯ ಉಃ ರಾಜಣ್ಣನವರು ಮೊದಲನೆ ಹೆಂಡತಿ ತೀರಿಕೊಂಡ ಬಳಿಕ 2ನೇ ಹೆಂಡತಿಯನ್ನು ಮದುವೆಯಾಗಿರುತ್ತಾರೆ. 2ನೇ ಹೆಂಡತಿಯು ಕಾನೂನುಬದ್ದ ಹೆಂಡತಿ ಆಗಿರುತ್ತಾರೆ. 2ನೇ ಹೆಂಡತಿ ಮತ್ತು ಅವರ ಮಕ್ಕಳುಗಳಿಗೆ ಸಮಾನ ಹಕ್ಕು ಇರುತ್ತದೆ. ಸಿದ್ದರಾಮಯ್ಯರವರು ತೀರಿಕೊಳ್ಳುವ ಪೂರ್ವದಲ್ಲಿ ದಿನಾಂಕ 10-10-1998 ಮತ್ತು 04-06-2004ರಂತೆ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದು, ಆ ವಿಭಾಗ ಪತ್ರಕ್ಕೆ ವಾದಿಗಳು ಮತ್ತು ಪ್ರತಿವಾದಿಗಳು ಅವರ ತಂದೆಯ ಸಮ್ಮುಖದಲ್ಲಿ ಸಹಿ ಹಾಕಿ ಅವರುಗಳ ಹೇಳಿಕೆಯ ಮೇರೆಗೆ ಖಾತೆಗಳು ಅವರವರ ಪಾಲಿಗೆ ಬಂದಿರುತ್ತವೆ. ಸಿದ್ದರಾಮಯ್ಯನವರ ಹೆಸರಿನಲ್ಲಿರುವ ಜಮೀನು ಅವರ ಹೆಸರಿನಲ್ಲೇ ಇದ್ದು ಈಗ ಅವರು ತೀರಿಕೊಂಡಿರುವುದರಿಂದ ವಾದಿ ಮತ್ತು ಪ್ರತಿವಾದಿಗಳು ಆ ಸ್ವತ್ತಿನ ಮೇಲೆ ಸಮಾನ ಹಕ್ಕು ಹೊಂದಿದ್ದಾರೆ. ದಿನಾಂಕ 10-10-1998 ಮತ್ತು ದಿನಾಂಕ 04-06-2004 ಮತ್ತು 03-08-2001ರ ಒಪ್ಪಿಗೆ ಪತ್ರಗಳಂತೆ ಖಾತೆಗಳನ್ನು ಮಾಡಿಸಿಕೊಂಡಿದ್ದು, ಪ್ರತಿವಾದಿಗಳ ಹೆಸರಿಗೆ ಬಂದಿರುವ ಸ್ವತ್ತುಗಳ ಮೇಲೆ ವಾದಿ ಮತ್ತು ಇತರೆ ಪ್ರತಿವಾದಿಗಳು ಹಕ್ಕು ಕೇಳಲು ಬರುವುದಿಲ್ಲ. 2ನೇ ವಾದಿಯ ಗಂಡ ಮತ್ತು 3, 4ನೇ ವಾದಿಗಳ ತಂದೆ ಮೃತ ಲೋಕೇಶ್‌ರವರು 1ನೇ ಪ್ರತಿವಾದಿಗೆ ಬರೆದುಕೊಟ್ಟ ಆಸ್ತಿಗಳನ್ನು ಹೊರತುಪಡಿಸಿ ಉಳಿದಂತ ಆಸ್ತಿಗಳಿಗೆ ವಾದಿಗಳು ಹಕ್ಕು ಹೊಂದಿದ್ದಾರೆ ಎಂದು ಒಪ್ಪಿರುತ್ತಾರೆ. 1ನೇ ವಾದಿ ಮತ್ತು 2ನೇ ಪ್ರತಿವಾದಿರವರುಗಳ ಸಮ್ಮುಖ ಮತ್ತು ಸಲಹೆಯಂತೆ ವಿಭಾಗ ಮಾಡಿಕೊಂಡಿರುತ್ತಾರೆ. ಪುನಃ ವಿಭಾಗ ಮಾಡುವ ಸನ್ನಿವೇಶ ಬರುವುದಿಲ್ಲ. ಆದ್ದರಿಂದ ಪ್ರಸ್ತುತ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕಾಗಿ ಕೋರಿರುತ್ತಾರೆ.

5. ಮೇಲ್ಕಂಡ ವಾದ ಮತ್ತು ಪ್ರತಿವಾದ ಪತ್ರಗಳ ಆಧಾರದ ಮೇಲೆ ಕೆಳಕಂಡಂತೆ ವಿವಾದಾಂಶಗಳನ್ನು ರಚಿಸಲಾಗಿದೆ.

1. Whether the plaintiffs prove that the suit properties are the joint family properties?

2. Whether the plaintiffs prove that the defendants have no right title interest in the suit properties?

3. Whether the plaintiffs prove that the sale deed executed by the 3rd defendant in favour of the 1st defendant is not binding on them?

4. Whether the plaintiffs prove that the defendants are illegitimate children of Siddaramaiah @ Rajanna?

5. Whether the defendants prove that already partition took place in respect of joint family properties on 10/10/1998 and 04/06/2004?

6. Whether the plaintiffs prove that they are entitled for the reliefs as sought for?

7. What order or Decree?

6. ವಾದಿಯು ಈ ದಾವೆಯನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ವಾದಿಯು ತಮ್ಮ ಸಾಕ್ಷ್ಯ ಪ್ರಮಾಣ ಪತ್ರ ಹೇಳಿಕೆಯನ್ನು ಸಲ್ಲಿಸಿ ಪಿಡಬ್ಲ್ಯೂ 1 ಆಗಿ ವಿಚಾರಣೆ ಮಾಡಿಕೊಂಡಿರುತ್ತಾರೆ. ನಿಪಿ-1 ರಿಂದ 11 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ತದ್ವಿರುದ್ದವಾಗಿ ಪ್ರತಿವಾದಿಗಳು ತಮ್ಮ ಪ್ರತಿಸಾದನೆ ರುಜುವಾತು ಪಡಿಸಲು 1ನೇ ಪ್ರತಿವಾದಿಯ ವಾರಸುದಾರರಾದ ಪ್ರತಿವಾದಿ 1ಬಿರವರು ಸ್ವತಃ ಡಿಡಬ್ಲ್ಯೂ-1 ಆಗಿ ವಿಚಾರಣೆ ಮಾಡಿಕೊಂಡು ತಮ್ಮ ಪರವಾಗಿ ಈಶ್ವರ ಎಂಬುವವರನ್ನು ಡಿಡಬ್ಲ್ಯೂ-2 ಆಗಿ ವಿಚಾರಣೆ ಮಾಡಿಕೊಂಡಿರುತ್ತಾರೆ. ತಮ್ಮ ಪರವಾಗಿ ನಿಡಿ-1 ರಿಂದ 10 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

**ನಿಪಿ-1 :** ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು ಕಸಬಾ ಹೋಬಳಿ ಚಿಟ್ಟನಹಳ್ಳಿ ಗ್ರಾಮದ ಸರ್ವೆ ನಂ.151/4 ಇದು 2013-14ನೇ ಸಾಲಿನ ಪಹಣಿ ಪತ್ರಿಕೆ ಕಲಂ 9ರಲ್ಲಿ

ರಾಜಣ್ಣ ಬಿನ್ ಕಾಳಪ್ಪರವರ ಹೆಸರು 06 ಗುಂಟೆಗೆ ಎಂಆರ್ 29/196-97ರಂತೆ ಪೌತಿ ಮೇರೆಗೆ ಎಂದು ಬಿಂಬಿಸುತ್ತದೆ.

<u>ನಿಪಿ-2-</u> ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಚಿಟ್ಟನಹಳ್ಳಿ ಗ್ರಾಮದ ಸರ್ವೆ ನಂ.128/8 ಇದು 2013-14ನೇ ಸಾಲಿನ ಪಹಣಿ ಪತ್ರಿಕೆ ಕಲಂ 9ರಲ್ಲಿ ರಾಜಣ್ಣ ಬಿನ್ ಕಾಳಪ್ಪರವರ ಹೆಸರಿಗೆ 1 ಎಕರೆ, ಮೊರಾರ್ಜಿದೇಸಾಯಿ ವಸತಿ ಶಾಲಾ ಸಮುಚ್ಚಯ ನಿರ್ಮಿಸುವ ಸಲುವಾಗಿ 13.08 ಗುಂಟೆ ಭೂ ಸ್ವಾದೀನ ಜಿ 58/2006-07ರಂತೆ ದಿನಾಂಕ 16-06-2010ರ ಉಪವಿಭಾಗಧಿಕಾರಿ ಮತ್ತು ಭೂಸ್ವಾದೀನಾಧಿಕಾರಿ ಹಾಸನರವರ ಆದೇಶದಂತೆ ಸ್ವಾದೀನ ಮಾಡಿರುವುದಾಗಿ ಕಂಡುಬರುತ್ತದೆ.

<u>ನಿಪಿ-3-</u> ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಹೊಳೆನರಸೀಪುರ ಗ್ರಾಮ ಸರ್ವೆ ನಂ.74/2ಬಿ ಇದು 2013-14ನೇ ಸಾಲಿನ ಪಹಣಿ ಪತ್ರಿಕೆ ಆಗಿದ್ದು, ಕಲಂ 9ರಲ್ಲಿ ಉಜೇಯೆಂದ್ರ ಕುಮಾರ 0.15.08 ಗುಂಟೆ ಮತ್ತು ಮಹೇಂದ್ರ ಕುಮಾರ 10.08 ಗುಂಟೆ ಎಂಆರ್ 2001-02ರ ಪಾರಿಕತ್ತಿನ ಮೇರೆಗೆ ದಾಖಲು ಮಾಡಿರುವುದಾಗಿ ಕಲಂ 10 ಬಿಂಬಿಸುತ್ತದೆ.

<u>ನಿಪಿ-4ಃ</u> ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ದಕ್ಷಿಣನಾಲಾ ಗ್ರಾಮ ಸರ್ವೆ ನಂ.120/1ಎ ಇದು 2013-14ನೇ ಸಾಲಿನ ಪಹಣಿ ಪತ್ರಿಕೆ ಆಗಿದ್ದು, ಕಲಂ 9ರಲ್ಲಿ ವಿಜೇಂದ್ರ ಕುಮಾರರವರ ಹೆಸರಿನಲ್ಲಿ 0.31.08 ಗುಂಟೆ ಮತ್ತು ವಿಜಯೇಂದ್ರ ಕುಮಾರರವರ ಹೆಸರನಲ್ಲಿ 15.08 ಗುಂಟೆ ಎಂಆರ್ 2/2001-02ರ ಪಾರಿಕತ್ತಿನ ಮೇರೆಗೆ ಖಾತೆ ದಾಖಲು ಮತ್ತು ಎಂಆರ್ 3/2004-05 06-10-2003ರ ಕ್ರಯಪತ್ರದ ಮೇರೆ ಖಾತೆಗೆ ದಾಖಲು ಆಗಿರುವುದಾಗಿ ಬಿಂಬಿಸುತ್ತದೆ.

<u>ನಿಪಿ-5ಃ</u> ಕೈ ಬರಹ ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಚಿಟ್ಟನಹಳ್ಳಿ ಗ್ರಾಮ ಸರ್ವೆ ನಂ.15/4 ಇದು 1976-77ರಿಂದ 1980-81ರವರೆಗೆ ಸಾಲಿನ ಪಹಣಿ ಪತ್ರಿಕೆ ಆಗಿದ್ದು, ಕಲಂ 9ರಲ್ಲಿ ನಿಂಗಮ್ಮ ಕೋಂ ಕಾಳಯ್ಯ ರವರ ಹೆಸರಿನಲ್ಲಿ 0.06 ಗುಂಟೆ ಕಲಂ 10ರಲ್ಲಿ ಅನುಭವದ ಮೇರೆಗೆ ಖಾತೆಗೆ ದಾಖಲು ಆಗಿರುವುದಾಗಿ ಬಿಂಬಿಸುತ್ತದೆ.

<u>ನಿಪಿ-6ಃ</u> ಕೈ ಬರಹ ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಚಿಟ್ಟನಹಳ್ಳಿ ಗ್ರಾಮದ ಸರ್ವೆ ನಂ.15/4 ಇದು 1980-81 ರಿಂದ 1985-86ರವರೆಗೆ ಸಾಲಿನ ಪಹಣಿ ಪತ್ರಿಕೆ ಆಗಿದ್ದು, ಕಲಂ 9ರಲ್ಲಿ ನಿಂಗಮ್ಮ ಕೋಂ ಕಾಳಯ್ಯ ರವರ ಹೆಸರಿನಲ್ಲಿ 0.06 ಗುಂಟೆ ಕಲಂ10 ಅನುಭವದ ಮೇರೆಗೆ ಖಾತೆಗೆ ದಾಖಲು ಆಗಿರುವುದಾಗಿ ಬಿಂಬಿಸುತ್ತದೆ.

<u>ನಿಪಿ-7ಃ</u> ಕೈ ಬರಹ ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಚಿಟ್ಟನಹಳ್ಳಿ ಗ್ರಾಮದ ಸರ್ವೆ ನಂ.128/8 ಇದು 1967-68 ರಿಂದ 2000-01ವರೆಗೆ ಕಲಂ 9ರಲ್ಲಿ

ನಿಂಗಮ್ಮ ಕೋಂ ಕಾಳಪ್ಪ ರವರ ಹೆಸರಿಗೆ 1 ಎಕರೆ 14 ಗುಂಟೆ ಖಾತೆ ಅನುಭವದ ಮೇರೆಗೆ ಇರುವುದಾಗಿ ಕಂಡುಬರುತ್ತದೆ.

**ನಿಪಿ-8ಃ** ಕೈ ಬರಹ ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಹೊಳೆನರಸೀಪುರ ಗ್ರಾಮದ ಸರ್ವೆ ನಂ.14/2ಬಿ ರಲ್ಲಿ 26 ಗುಂಟೆ 1996-97 ರಿಂದ 2000-01ರವರೆಗೆ ಕಾಳಪ್ಪ ಬಿನ್ ಕರಿಯಣ್ಣ ಎಂದು ನಮೂದು ಇದ್ದು ನಂತರ ವಿಜಯೇಂದ್ರ ಕುಮಾರ, ಮಹೇಂದ್ರ ಕುಮಾರವರ ಹೆಸರಿಗೆ ಎಂಆರ್ 1/2001-02ರಂತೆ ಖಾತೆ ವರ್ಗಾವಣೆ ಆಗಿರುವುದಾಗಿ ಕಂಡುಬರುತ್ತದೆ.

**ನಿಪಿ-9ಃ** ಕೈ ಬರಹ ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಹೊಳೆನರಸೀಪುರ ಗ್ರಾಮದ ಸರ್ವೆ ನಂ.74/2ಬಿರಲ್ಲಿ 26 ಗುಂಟೆ ವಿಸ್ತೀರ್ಣಕ್ಕೆ ಕಲಂ 9ರಲ್ಲಿ ಕಾಳಪ್ಪ ಬಿನ್ ಕರಿಯಣ್ಣರವರ ಹೆಸರು 1981-82ರಿಂದ 1985-86ರವರರೆಗೂ ನಮೂದು ಇರುವುದಾಗಿ ಕಂಡುಬರುತ್ತದೆ.

**ನಿಪಿ-10ಃ** ಕೈ ಬರಹ ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ದಕ್ಷಿಣ ನಾಲಾ ಗ್ರಾಮದ ಸರ್ವೆ ನಂ.120/1ಎ 1 ಎಕರೆ 07 ಗುಂಟೆ ಕಲಂ 9ರಲ್ಲಿ ಸಿದ್ದರಾಮಯ್ಯ ಉಃ ರಾಜಣ್ಣ ಬಿನ್ ಕಾಳಪ್ಪ ಎಂದು ನಮೂದು ಇದ್ದು ಅನಂತರ ವಿಜಯೇಂದ್ರ ಕುಮಾರ ಮತ್ತು ಮಹೇಂದ್ರಕುಮಾರವರಿಗೆ ಎಂಆರ್ 1/2001-02ರಂತೆ ಖಾತೆ ಬದಲಾವಣೆ ಆಗಿರುವುದಾಗಿ ಕಂಡುಬರುತ್ತದೆ. 1996-97 ರಿಂದ 2000-01 ಸಾಲಿನ ಪಹಣಿ ಪತ್ರಿಕೆಗಳು ಎಂದು ಕಂಡುಬರುತ್ತದೆ.

**ನಿಪಿ-11ಃ** ಕೈ ಬರಹ ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು ಕಸಬಾ ಹೋಬಳಿ ಚಿಟ್ಟನಹಳ್ಳಿ ಗ್ರಾಮದ ಸರ್ವೆ ನಂ.151/4 06 ಗುಂಟೆ ಕಲಂ 9ರಲ್ಲಿ ನಿಂಗಮ್ಮ ಕೋಂ ಕಾಳಯ್ಯರವರ ಹೆಸರಿಗೆ 1973-74 ರಿಂದ 1977-78 ನೇ ಸಾಲಿನವರಿಗೆ ನಮೂದು ಇರುವುದಾಗಿ ಕಂಡುಬರುತ್ತದೆ.

**ಪ್ರತಿವಾದಿಗಳ ದಾಖಲಾತಿಗಳು**

**ನಿಡಿ-1ಃ** ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಹೊಳೆನರಸೀಪುರ ಗ್ರಾಮ ಸರ್ವೆ ನಂ.74/2ಬಿ ಇದು 2013-14ನೇ ಸಾಲಿನ ಪಹಣಿ ಪತ್ರಿಕೆ ಆಗಿದ್ದು, ಕಲಂ 9ರಲ್ಲಿ ಉಜೇಯೆಂದ್ರ ಕುಮಾರ 0.15.08 ಗುಂಟೆ ಮತ್ತು ಮಹೇಂದ್ರ ಕುಮಾರ 10.08 ಗುಂಟೆ ಎಂಆರ್ 2001-02ರ ಪಾರಿಕತ್ತಿನ ಮೇರೆಗೆ ದಾಖಲು ಮಾಡಿರುವುದಾಗಿ ಕಲಂ 10 ಬಿಂಬಿಸುತ್ತದೆ.

**ನಿಡಿ-2ಃ** ಗಣಕ ಪಹಣಿ ಪತ್ರಿಕೆ- ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ದಕ್ಷಿಣನಾಲಾ ಗ್ರಾಮ ಸರ್ವೆ ನಂ.120/1ಎರಲ್ಲಿ 0.31.08 ಗುಂಟೆ ಮತ್ತು ವಿಜಯೇಂದ್ರ ಕುಮಾರರವರ ಹೆಸರನಲ್ಲಿ 15.08 ಗುಂಟೆ ಮಹೇಂದ್ರಕುಮಾರ ಬಿನ್ ಸಿದ್ದರಾಮಯ್ಯ ಉಃ ರಾಜಣ್ಣರವರಿಂದ 06-10-2003 ರ ಕ್ರಯಪತ್ರದ ಮೇರೆ ಖಾತೆಗೆ ದಾಖಲು ಆಗಿರುವುದಾಗಿ ಬಿಂಬಿಸುತ್ತದೆ.

**ನಿಡಿ-3ಃ** ಮ್ಯುಟೇಷನ್ ವಹಿ, ಎಂಆರ್ 5/2003-04ರಂತೆ ಹೊಳೆನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ದಕ್ಷಿಣನಾಲಾ ಗ್ರಾಮ ಸರ್ವೆ ನಂ.120/1ಎಇದು 2013-14ನೇ ಸಾಲಿನ ಪಹಣಿ ಪತ್ರಿಕೆ ಆಗಿದ್ದು, ಕಲಂ 9ರಲ್ಲಿ ವಿಜೇಂದ್ರ ಕುಮಾರರವರ ಹೆಸರಿನಲಿ 15.08 ಗುಂಟೆ ಜಮೀನು 06-10-2003ರ ಕ್ರಯಪತ್ರದ ಮೇರೆ ಖಾತೆಗೆ ದಾಖಲು ಆಗಿರುವುದಾಗಿ ಬಿಂಬಿಸುತ್ತದೆ.

**ನಿಡಿ-4 ಮತ್ತು 5ಃ** ಕ್ರಯಪತ್ರಗಳು ದಿನಾಂಕ 06/05/2003ರಂದು 1ನೇ ಪ್ರತಿವಾದಿಗೆ 3ನೇ ಪ್ರತಿವಾದಿ ತನ್ನ ಮೈನರ್ ಮಕ್ಕಳ ಪರವಾಗಿ ದಕ್ಷಿಣ ನಾಲಾ ಗ್ರಾಮದ ಸರ್ವೆ ನಂ.120/1ಎನಲ್ಲಿ 15-1/2 ಗುಂಟೆ ಜಮೀನನ್ನು 41,000/- ರೂಗಳಿಗೆ ಮಾರಾಟ ಮಾಡಿರುವುದಾಗಿ ಕಂಡುಬರುತ್ತದೆ

**ನಿಡಿ-6-** ಕಂದಾಯ ಪಾವತಿ ರಶೀದಿಗಳು, ದಿನಾಂಕ 20/7/2011ರಂದು ವಿಜೇಂದ್ರಕುಮಾರ ಬಿನ್ ಸಿದ್ದರಾಮಯ್ಯ ಉಃ ರಾಜಣ್ಣರವರ ರವರು ಸರ್ವೆ ನಂ.120/1ಎ ಕ್ಕೆ 2010-11ನೇ ಸಾಲಿನ ಕಂದಾಯ ಪಾವತಿ ಮಾಡಿರುವುದಾಗಿ ಕಂಡುಬರುತ್ತದೆ.

**ನಿಡಿ-7-** ಕಂದಾಯ ಪಾವತಿ ರಶೀದಿಗಳು, ದಿನಾಂಕ 17/10/2011ರಂದು ವಿಜಯೇಂದ್ರಕುಮಾರ ಬಿನ್ ಸಿದ್ದರಾಮಯ್ಯ ಉಃ ರಾಜಣ್ಣರವರ ರವರು ಸರ್ವೆ ನಂ.120/1ಎ ಕ್ಕೆ 2000-01ನೇ ಸಾಲಿನ ಕಂದಾಯ ಪಾವತಿ ಮಾಡಿರುವುದಾಗಿ ಕಂಡುಬರುತ್ತದೆ.

**ನಿಡಿ-8-** ಹಿಡುವಳಿ ಪತ್ರ, ದಕ್ಷಿಣಾ ನಾಲಾ ಗ್ರಾಮದ ಸರ್ವೆ ನಂ.120/1ಎ ರಲ್ಲಿ 1 ಎಕರೆ 07 ಗುಂಟೆ ಜಮೀನಿನ ಖಾತೆದಾರರರು ಹಿಡುವಳಿದಾರರಾಗಿರುತ್ತಾರೆ ಎಂದು ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಹಿಡುವಳಿ ಪತ್ರ ನೀಡಿರುವುದಾಗಿ ಕಂಡುಬರುತ್ತದೆ.

**ನಿಡಿ-9 ಮತ್ತು 10-** ಪಟ್ಟಾ ಪುಸ್ತಕ, ದಕ್ಷಿಣಾ ನಾಲಾ ಗ್ರಾಮದ ಸರ್ವೆ ನಂ.120/1ಎ ಕ್ಕೆ ವಿಜೇಂದ್ರಕುಮಾರ ಬಿನ್ ಸಿದ್ದರಾಮಯ್ಯ ಉಃ ರಾಜಣ್ಣರವರ ರವರು ಹೆಸರು ನಮೂದಾಗಿರುವುದಾಗಿ ಕಂಡುಬರುತ್ತದೆ.

7. ವಾದಿಗಳು ಮತ್ತು ಪ್ರತಿವಾದಿಗಳ ಪರ ವಕೀಲರ ವಾದ ಮಂಡನೆಯನ್ನು ಆಲಿಸಲಾಯಿತು. ಕಡತವನ್ನು ಸಂಪೂರ್ಣವಾಗಿ ಪರಾಮರ್ಶಿಸಲಾಯಿತು.

8. ವಾದಿ ಪರ ಶ್ರೀ **ಎ.ಎಸ್‌ರವರು** ವಕೀಲರು ನ್ಯಾಯಾಲಯದ ಮುಂದೆ ಮಂಡಿಸಿದ್ದು ವಾದ ಮಂಡನೇಂದರೆ ದಾವಾ ಷೆಡ್ಯೂಲ್ ಸ್ವತ್ತುಗಳು ಮೂಲವಾಗಿ ವಾದಿ ಮತ್ತು ಪ್ರತಿವಾದಿಗಳ ತಂದೆ ಹಾಗೂ ಕುಟುಂಬದ ಮೂಲ ಪುರುಷ ಸಿದ್ದರಾಮಯ್ಯ ಉಃ ರಾಜಣ್ಣ ರವರಿಗೆ ತನ್ನ ಪೂರ್ವಜರಿಂದ ಬಂದಿರುವ ಸ್ವತ್ತುಗಳಾಗಿದ್ದು, ವಾದಿ ಮತ್ತು ಪ್ರತಿವಾದಿಗಳು ಒಬ್ಬನೇ ತಂದೆ ಇಬ್ಬರು

ತಾಯಿಯ ಮಕ್ಕಳಾಗಿದ್ದು, ವಾದಿಗಳು ಸಿದ್ದರಾಮಯ್ಯನವರ ಮಕ್ಕಳು ಎನ್ನುವ ಬಗ್ಗೆ ವಿವಾದಗಳಿರುವುದಿಲ್ಲ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ರಕ್ತ ಸಂಬಂಧವನ್ನು ಅಲ್ಲಗಳೆದಿಲ್ಲ. ವಾದಿಗಳು ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದಲ್ಲಿ ಈಗಲೂ ಜೀವನ ನೆಡೆಸುತ್ತಿದ್ದು, ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಇಲ್ಲಿಯವರೆಗೂ ಕಾನೂನುಬದ್ದವಾದ ಹಿಸ್ಸೆ ಆಗಿಲ್ಲ ಪ್ರತಿವಾದಿಗಳು ತನ್ನ ತಂದೆ ಜೀವಂತ ಇದ್ದಾಗ ಎಲ್ಲಾ ಸ್ವತ್ತುಗಳಲ್ಲೂ ಮೊದಲನೇ ಹೆಂಡತಿ ಮತ್ತು ಎರಡನೇ ಹೆಂಡತಿ ಮಕ್ಕಳುಗಳ ನಡುವೆ ವಿಭಾಗ ಆಗಿತ್ತೆಂದು ಪ್ರತಿಪಾದನೆಯನ್ನು ತೆಗೆದುಕೊಂಡಿದ್ದು, ಅದನ್ನು ಪುಷ್ಟಿಕರಿಸುವ ಯಾವುದೇ ದಾಖಲೆಯನ್ನು ಪ್ರತಿವಾದಿಗಳು ಈ ನ್ಯಾಯಾಲಯ ಮುಂದೆ ಹಾಜರುಪಡಿಸಿಲ್ಲ. ಪ್ರತಿವಾದಿಗಳ ಪ್ರತಿವಾದ ಪತ್ರದಂತೆ ದಿನಾಂಕ 10-10-1998 ಮತ್ತು 04-06-2004 ರಂದು ವಿಭಾಗ ಆಗಿದೆ ಎಂದು ಸಾಧನೆ ಮಾಡಿದ್ದು, ಸದರಿ ವಿಭಾಗ ಪತ್ರಗಳನ್ನು ಪ್ರತಿವಾದಿಗಳು ಹಾಜರುಪಡಿಸಿಲ್ಲ, ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದ ಆಧಾರದ ಮೇಲೆ ವಿವಾದಾಂಶ 5ನ್ನು ಈ ನ್ಯಾಯಾಲಯ ರಚಿಸಿದ್ದು, ಅದನ್ನು ಪ್ರತಿವಾದಿಗಳು ಸ್ಪಷ್ಟ ಸಾಕ್ಷ್ಯಾದಾರಗಳನ್ನು ನೀಡಿ ಸಾಬೀತುಪಡಿಸಿರುವುದಿಲ್ಲ. 1ನೇ ಪ್ರತಿವಾದಿ ಹೆಸರಿಗೆ 3ನೇ ಪ್ರತಿವಾದಿಯು ಕ್ರಯಪತ್ರ ಮಾಡಿಕೊಟ್ಟಿದ್ದಾರೆ. ಆ ಕ್ರಯಪತ್ರಕ್ಕೆ ಇತರ ವಾದಿ ಮತ್ತು ಪ್ರತಿವಾದಿಗಳು ಸಹಿ ಮಾಡಿರುವುದಿಲ್ಲ. ಪ್ರತಿವಾದಿಗಳ ಹೆಸರಿಗೆ ಕಂದಾಯ ದಾಖಲಾತಿಗಳು ಬದಲಾವಣೆ ಆಗಿರುವ ಬಗ್ಗೆ ವಿಭಾಗ ಪತ್ರದ ನೆಲೆಯಲ್ಲಿ ಖಾತೆ ಬದಲಾವಣೆ ಆಗಿವೆ ಎಂದು ನಮೂದು ಇರುವುದಿಲ್ಲ. ಸಿದ್ದರಾಮಯ್ಯ ಉಃ ರಾಜಣ್ಣರವರು ಸರೋಜಮ್ಮರವರನ್ನು ಮೊದಲನೇ ಹೆಂಡತಿ ಶಾರದಮ್ಮರವರು ಜೀವಂತ ಇದ್ದಾಗ ಮದುವೆಯಾಗಿದ್ದಾರೆ. ವಾದಿಗಳು 1ನೇ ಹೆಂಡತಿಯ ಮಕ್ಕಳುಗಳಾಗಿದ್ದು, ಪ್ರತಿವಾದಿಗಳು ಮೊದಲನೆ ಮದುವೆ ಅಸ್ತಿತ್ವದಲ್ಲಿರುವಾಗ ಸಿದ್ದರಾಮಯ್ಯರವರು ಸರೋಜಮ್ಮರವರೊಂದಿಗೆ ಅನೈತಿಕ ಸಂಬಂಧ ಹೊಂದಿ ಜನಿಸಿರುವ ಮಕ್ಕಳುಗಳು. ಪ್ರತಿವಾದಿಗಳು ಕಾನೂನುಬದ್ದ ವಾರಸುದಾರರಲ್ಲ. ವಾದಿ ಮತ್ತು ಪ್ರತಿವಾದಿಗಳ ಸ್ವತ್ತುಗಳೆಂದು ಯಾವುದೇ ವಿಭಾಗ ಪತ್ರ ಆಗದೇ ಇದ್ದರೂ ಪ್ರತಿವಾದಿಗಳು ಪರಸ್ಪರ ಶಾಮೀಲು ಮಾಡಿಕೊಂಡು ಒಟ್ಟು ಕುಟುಂಬದ ಆಸ್ತಿಯನ್ನು ಪಡೆದುಕೊಳ್ಳಬೇಕೆಂಬ ಮನಸ್ಸಿನಿಂದ ಮೋಸಕರ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ

ಹೇಳಿರುವಂತೆ ಯಾವುದೇ ವಿಬಾಗ ಪತ್ರ ಇಲ್ಲಿಯವರೆಗೂ ಆಗಿರುವುದಿಲ್ಲ. ಒಟ್ಟು ಕುಟುಂಬದ ಆಸ್ತಿಗಳು ಇಲ್ಲಿಯವರೆವಿಗೂ ವಿಭಜನೆ ಆಗಿಲ್ಲ. ಈ ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಸಮಾನ ಹಿಸ್ಸೆ ಹಕ್ಕು ಇದ್ದು, ವಾದಿಗಳ ಕಾನೂನುಬದ್ದ ಹಿಸ್ಸೆಯನ್ನು ಪ್ರತ್ಯೇಕಿಸಿ ಸ್ವಾದೀನ ಕೊಡಿಸಬೇಕಾಗಿ ಮತ್ತು ಪ್ರತಿವಾದಿಗಳು ಪರಸ್ಪರ ಶಾಮೀಲು ಮಾಡಿಕೊಂಡು ಸೃಷ್ಟಿಸಿರುವ ಕ್ರಯಪತ್ರಗಳು ವಾದಿಗಳ ಹಿಸ್ಸೆ ಹಕ್ಕಿಗೆ ಬದ್ದಪಡಿಸಿರುವುದಿಲ್ಲ ಎಂದು ವಾದಿಸಿರುತ್ತಾರೆ.

9. ಇದಕ್ಕೆ ತದ್ವಿರುದ್ದವಾಗಿ ಪ್ರತಿವಾದಿಗಳ ಪರ **ಶ್ರೀ ಕೆಕೆಆರ್** ವಕೀಲರು ತಮ್ಮ ವಾದ ಮಂಡನೆಯನ್ನು ಮಂಡಿಸಿದ್ದು, ಅವರ ಬಹುಮುಖ್ಯ ವಾದ ಮಂಡನೆ ಏನೆಂದರೆ ಪ್ರಸ್ತುತ ದಾವೆಯನ್ನು ವಾದಿಗಳು ಪ್ರತಿವಾದಿಗಳಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ದಾಖಲಿಸಿದ್ದಾರೆ. ವಾದಿ ಮತ್ತು ಪ್ರತಿವಾದಿಗಳ ತಂದೆಗೆ ಇಬ್ಬರು ಹೆಂಡತಿಯರಿದ್ದು, ಮೊದಲನೆ ಹೆಂಡತಿ ಮರಣ ಹೊಂದಿದ್ದ ನಂತರ ಸಿದ್ದರಾಮಯ್ಯ ಉಃ ರಾಜಣ್ಣರವರು 2ನೇ ಹೆಂಡತಿಯನ್ನು ಮದುವೆಯಾಗಿರುತ್ತಾರೆ. 1ನೇ ವಾದಿಗೆ ಸುಮಾರು 65 ವರ್ಷಕ್ಕಿಂತಲೂ ಜಾಸ್ತಿ ವಯಸ್ಸಾಗಿದೆ. ದಾವೆಯನ್ನು ದಾಖಲು ಮಾಡುವಾಗ ಅವರ ವಯಸ್ಸನ್ನು ಕಡಿಮೆ ತೋರಿಸಿ ದಾಖಲು ಮಾಡಿದ್ದಾರೆ. ಪ್ರಾಸಾ 1ರವರನ್ನು ಪಾಟೀಸವಾಲು ಮಾಡವಾಗ ಮೊದಲನೆ ಹೆಂಡತಿ ಮರಣ ಹೊಂದಿದ್ದ ನಂತರ ಸಿದ್ದರಾಮಯ್ಯ ಉಃ ರಾಜಣ್ಣರವರು 2ನೇ ಹೆಂಡತಿ ಸರೋಜಮ್ಮನವರನ್ನು ಮದುವೆ ಆದರೆಂದು ಒಪ್ಪಿರುತ್ತಾರೆ. ಪ್ರತಿವಾದಿಗಳು ಸಿದ್ದರಾಮಯ್ಯ ಉಃ ರಾಜಣ್ಣ ಮತ್ತು ಅವರ 2ನೇ ಹೆಂಡತಿ ಸರೋಜಮ್ಮನವರ ಕಾನೂನುಬದ್ದ ಮಕ್ಕಳಾಗಿದ್ದು, ವಾದಿ ಹೇಳುವಂತೆ ಪ್ರತಿವಾದಿಗಳು ಅನೈತಿಕ ಸಂಬಂಧದಿಂದ ಹುಟ್ಟಿದ ಮಕ್ಕಳುಗಳಾಗಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಾಗಿದ್ದು ವಾದಿ ಮತ್ತು ಪ್ರತಿವಾದಿಗಳ ತಂದೆ ಸಿದ್ದರಾಮಯ್ಯನವರು ಜೀವಂತ ಇದ್ದಾಗಲೇ ತನ್ನ ಇಬ್ಬರು ಹೆಂಡತಿಗಳ ಮಕ್ಕಳುಗಳಿಗೆ ತಾನು ಹೊಂದಿದ್ದ ಆಸ್ತಿಗಳನ್ನು ವಿಭಾಗ ಮಾಡಿಕೊಟ್ಟಿರುತ್ತಾರೆ. ಆ ವಿಭಾಗ ಪತ್ರಗಳಂತೆ ಕಂದಾಯ ದಾಖಲಾತಿಗಳು ಬದಲಾವಣೆ ಆಗಿರುತ್ತವೆ. ವಿಭಾಗ ಪತ್ರಗಳು ನೊಂದಣಿ ಆಗಿರುವುದಿಲ್ಲ. ಖಾತೆಯನ್ನು ಬದಲಾವಣೆ ಮಾಡಿಕೊಳ್ಳುವಾಗ ವಾದಿಗಳು ಮತ್ತು ಎಲ್ಲಾ ಪ್ರತಿವಾದಿಗಳು ಒಪ್ಪಿಗೆ

ಹೇಳಿಕೆಯನ್ನು ನೀಡಿ ಖಾತೆ ಬದಲಾವಣೆ ಮಾಡಿರುತ್ತಾರೆ. ಈ ಎಲ್ಲಾ ಸಂಗತಿಗಳು ವಾದಿಗಳಿಗೂ ಗೊತ್ತಿರುತ್ತದೆ. ಮೊದಲನೆ ಹೆಂಡತಿ ಮಗ ಮೃತ ಲೋಕೇಶರವರು ತನ್ನ ಹಿಸ್ಸೆಗೆ ಬಂದಿದ್ದ ಆಸ್ತಿಗಳನ್ನು 1ನೇ ಪ್ರತಿವಾದಿಗೆ ಮಾರಾಟ ಮಾಡಿ 1,42,000/-ರೂಗಳನ್ನು ಪಡೆದುಕೊಂಡಿದ್ದಾರೆ. ವಿಭಾಗ ಪತ್ರದ ಮೂಲಕ ಮೃತ ಲೋಕೇಶ್‌ರವರ ಹಿಸ್ಸೆಗೆ ಬಂದ ಸ್ವತ್ತನ್ನು 1ನೇಪ್ರತಿವಾದಿಗೆ ಮಾರಾಟ ಮಾಡಿರುವುದರಿಂದ ಪುನಃ ಅವರ ಹೆಂಡತಿ ಮತ್ತು ಮಕ್ಕಳುಗಳು ವಿಭಾಗ ನೀಡಬೇಕೆಂದು ಕೋರುವುದು ಸಮಂಜಸವಾದುದ್ದಲ್ಲ. 2ನೇ ಹೆಂಡತಿಯ ಮಗ 3ನೇ ಪ್ರತಿವಾದಿಯು ವಿಭಾಗ ಪತ್ರದಂತೆ ಅವರ ಹಿಸ್ಸೆಗೆ ಹೋಗಿದ್ದ ಸ್ವತ್ತನ್ನು 1ನೇ ಪ್ರತಿವಾದಿ ಹೆಸರಿಗೆ ಶುದ್ಧಕ್ರಯಪತ್ರವನ್ನು ಬರೆದುಕೊಟ್ಟಿದ್ದಾರೆ. ಮೃತ ಲೋಕೇಶ ಮತ್ತು 3ನೇ ಪ್ರತಿವಾದಿ ಮಹೇಂದ್ರಕುಮಾರರವರು ಬರೆದುಕೊಟ್ಟ ಕ್ರಯಪತ್ರದ ಆಧಾರದಲ್ಲಿ 1ನೇ ಪ್ರತಿವಾದಿ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ. ಸಿದ್ದರಾಮಯ್ಯ ಮತ್ತು ಅವರ ಹೆಂಡತಿಯರಿಗಾಗಿ ಬಿಟ್ಟುಕೊಟ್ಟಿದ್ದ ಸ್ವತ್ತುಗಳಲ್ಲಿ ಎಲ್ಲಾ ವಾದಿ ಮತ್ತು ಪ್ರತಿವಾದಿಗಳಿಗೂ ಸಮಾನ ಹಕ್ಕು ಇರುತ್ತದೆ. ಉಳಿದ ಎಲ್ಲಾ ಸ್ವತ್ತುಗಳು ವಿಭಾಗ ಆಗಿದ್ದು, ಆ ಸ್ವತ್ತುಗಳ ಮೇಲೆ ಪುನಃ ದಾವೆ ತಂದಿರುವುದು ಊರ್ಜಿತವಾದುದ್ದಲ್ಲ. ಈ ದಾವೆಯಲ್ಲಿ ಸಿದ್ದರಾಮಯ್ಯ ಉಃರಾಜಣ್ಣನವರ 2ನೇ ಹೆಂಡತಿಯನ್ನು ಸೇರಿಸದೇ ದಾವೆ ಹೂಡಿದ್ದಾರೆ. ಆದ್ದರಿಂದ ಪ್ರಸ್ತುತ ದಾವೆ ಈ ನೆಲೆಯಲ್ಲಿ ಊರ್ಜಿವಾಗತಕ್ಕದ್ದಲ್ಲ. ವಾದಿ ಮತ್ತು ಪ್ರತಿವಾದಿಗಳ ತಂದೆ ಸಿದ್ದರಾಮಯ್ಯ ಉಃ ರಾಜಣ್ಣನವರು ಜೀವಂತ ಇರುವ ತನಕ ಅವರ ಹೆಣ್ಣು ಮಕ್ಕಳು ದಾವೆಯನ್ನು ಸಲ್ಲಿಸಿರುವುದಿಲ್ಲ. ಮೊದಲನೇ ಹೆಂಡತಿ ಮತ್ತು 2ನೇ ಹೆಂಡತಿಯ 3 ಜನ ಗಂಡು ಮಕ್ಕಳು ದಾವಾ ಷೆಡ್ಯೂಲ್ ಸ್ವತ್ತುಗಳನ್ನು ದಿನಾಂಕ 4-06-2004ರ ಮತ್ತು 10-10-1998ರ ಹಾಗೂ 03-08-2001ರ ವಿಭಾಗ ಪತ್ರ ಮತ್ತು ಒಪ್ಪಿಗೆ ಪತ್ರದಂತೆ ವಿಭಾಗ ಮಾಡಿಕೊಂಡು ಖಾತೆ ವಗೈರೆಗಳನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಈಗಾಗಲೇ ವಿಭಾಗ ಆಗಿರುವುದರಿಂದ ಪುನಃ ವಿಭಾಗ ಮಾಡುವ ಅಗತ್ಯತೆ ಇರುವುದಿಲ್ಲ. ಆದ್ದರಿಂದ ವಾದಿಗಳು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ವಾದಿಸಿರುತ್ತಾರೆ.

10. ಈ ಕೆಳಕಂಡ ಕಾರಣಗಳಿಗಾಗಿ ಮೇಲಿನ ವಿವಾದಾವಂಶಗಳನ್ನು ನಾನು ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ವಿವಾದಾವಂಶ :1: ನಕರಾತ್ಮಕವಾಗಿ
ವಿವಾದಾವಂಶ :2: ನಕರಾತ್ಮಕವಾಗಿ
ವಿವಾದಾವಂಶ :3: ಸಕರಾತ್ಮಕವಾಗಿ
ವಿವಾದಾವಂಶ :4: ನಕರಾತ್ಮಕವಾಗಿ
ವಿವಾದಾವಂಶ :5: ನಕರಾತ್ಮಕವಾಗಿ
ವಿವಾದಾವಂಶ :6: ಅಂತಿಮ ಆದೇಶದಂತೆ

**:: ಕಾರಣಗಳು ::**

11. **ವಿವಾದಾಂಶ.1 ಮತ್ತು 4:** ಈ ಎರಡು ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ ವಸ್ತು ಸ್ಥಿತಿ ಮತ್ತು ಸಾಕ್ಷ್ಯ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಎಲ್ಲಾ ವಿವಾದಾಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಂಡಿರುತ್ತೇನೆ.

12. ವಾದಿಗಳು ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಪ್ರತ್ಯೇಕ ಹಿಸ್ಸೆ ಮಾಡಬೇಕಾಗಿ ಹಾಗೂ 3ನೇ ಪ್ರತಿವಾದಿಯು 1ನೇ ಪ್ರತಿವಾದಿ ಹೆಸರಿಗೆ ಮಾಡಿರುವ ಕ್ರಯಪತ್ರಗಳು ವಾದಿಗಳ ಹಿಸ್ಸೆ ಹಕ್ಕಿಗೆ ಬದ್ದಪಡಿಸುವುದಿಲ್ಲ ಎಂದು ಘೋಷಿಸಬೇಕಾಗಿ ಸಲ್ಲಿಸಿದ್ದಾರೆ. ವಾದಿಗಳು ತಮ್ಮ ವಾದ ಪತ್ರದಲ್ಲಿ ದಾವಾ ಷೆಡ್ಯೂಲ್ ಸ್ವತ್ತುಗಳು ಕುಟುಂಬದ ಮೂಲ ಪುರುಷ ಸಿದ್ದರಾಮಯ್ಯ ಉ: ರಾಜಣ್ಣನವರ ಪಿತ್ರಾರ್ಜಿತ ಸ್ವತ್ತುಗಳೆಂದು ಮತ್ತು ಆ ಸ್ವತ್ತುಗಳಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ಕಾನೂನುಬದ್ದ ಹಿಸ್ಸೆ ಆಗಿಲ್ಲ ಎಂದು ಸ್ಪಷ್ಟ ಪ್ರತಿಪಾದನೆ ಮಾಡಿರುತ್ತಾರೆ. ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತುಗಳೆಲ್ಲಾ ಪಿತ್ರಾರ್ಜಿತ ಸ್ವತ್ತುಗಳೆಂದು ಒಪ್ಪಿರುತ್ತಾರೆ. ಆದರೆ ಒಟ್ಟು ಕುಟುಂಬದ ಸ್ವತ್ತುಗಳ ಸ್ವರೂಪದಲ್ಲಿ ಹೊಂದಿಲ್ಲ ಎಂದು ನಿರಾಕರಿಸಿರುತ್ತಾರೆ. ಮೃತ ಸಿದ್ದರಾಮಯ್ಯ ಉ: ರಾಜಣ್ಣನವರ 3 ಜನ ಗಂಡು ಮಕ್ಕಳು ಪ್ರತ್ಯೇಕ ಇರುವುದಾಗಿ ಕಂಡುಬರುತ್ತದೆ. ಹೆಣ್ಣುಮಕ್ಕಳು ಮದುವೆಯಾಗಿ ಗಂಡನ ಮನೆಯಲ್ಲಿ ವಾಸ ಇರುತ್ತಾರೆ. ಪ್ರತಿವಾದಿಗಳು ತಮ್ಮ

ಪ್ರತಿವಾದ ಪತ್ರದಲ್ಲಿ ಹೇಳಿರುವಂತೆ ಅವರ ತಂದೆ ಜೀವಂತ ಇದ್ದಾಗ ವಾದಿ ಮತ್ತು ಪ್ರತಿವಾದಿಗಳ ನಡುವೆ ಸ್ವತ್ತುಗಳು ವಿಭಾಗ ಆಗಿದ್ದವು ಎಂದು ಲಿಖಿತ ದಾಖಲೆಯನ್ನು ನೀಡಿ ಪ್ರತಿವಾದಿಗಳು ಸಾಬೀತುಪಡಿಸಿರುವುದಿಲ್ಲ. ವಾದಿಗಳು ಮತ್ತು ಪ್ರತಿವಾದಿಗಳು ಹಾಜರುಪಡಿಸಿರುವ ಕಂದಾಯ ದಾಖಲಾತಿಗಳಲ್ಲಿ ವಾದಿ ಮತ್ತು ಪ್ರತಿವಾದಿಗಳ ತಂದೆ ಮೃತ ಸಿದ್ದರಾಮಯ್ಯ ಉಃ ರಾಜಣ್ಣ ಬಿನ್ ಕಾಳಪ್ಪ ಮತ್ತು 1 ಮತ್ತು 3ನೇ ಪ್ರತಿವಾದಿಗಳ ಹೆಸರುಗಳು ಕಂಡುಬರುತ್ತವೆ. 1 ಮತ್ತು 3ನೇ ಪ್ರತಿವಾದಿಗಳ ಹೆಸರಿಗೆ ಪಂಚಾಯತ್ ಪಾರಿಕತ್ತು ಆಧಾರದಲ್ಲಿ ಬದಲಾವಣೆ ಮಾಡಿರುವುದಾಗಿ ಕಂದಾಯ ದಾಖಲಾತಿಗಳಲ್ಲಿ ನಮೂದು ಇದ್ದು, ಆ ಪಂಚಾಯತ್ ಪಾಲುಪರಿಕತ್ತನ್ನು ಪ್ರತಿವಾದಿಗಳು ಹಾಜರುಪಡಿಸಿಲ್ಲ. ದಾವಾ ಷೆಡ್ಯೂಲ್ ಐಟಂ 1 ರಿಂದ 3 ಸ್ವತ್ತುಗಳು ಕಸಬಾ ಹೋಬಳಿಯ ಚಿಟ್ಟನಹಳ್ಳಿ ಗ್ರಾಮದಲ್ಲಿದ್ದು, 4ನೇ ಷೆಡ್ಯೂಲ್ ಸ್ವತ್ತು ಕಸಬಾ ಹೋಬಳಿ ದಕ್ಷಿಣಾ ನಾಲಾದಲ್ಲಿ ಇರುತ್ತದೆ. ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ ಸರ್ವೆ ನಂ.151/4 06 ಗುಂಟೆ ರಾಜಣ್ಣ ಬಿನ್ ಕಾಳಪ್ಪ ಮತ್ತು ಸರ್ವೆ ನಂ120/8 1 ಎಕರೆ 14 ಗುಂಟೆ ರಾಜಣ್ಣ ಬಿನ್ ಕಾಳಪ್ಪ ಹಾಗೂ ಸರ್ವೆ ನಂ.174/2ಬಿ 26 ಗುಂಟೆ ಉಜೆಯೇಂದ್ರಕುಮಾರ ಬಿನ್ ಸಿದ್ದರಾಮಯ್ಯ ಃ ರಾಜಣ್ಣ ರವರ ಹೆಸರಿನಲ್ಲಿದ್ದು, ಸರ್ವೆ ನಂ.120/1ಎ 1 ಎಕರೆ 07 ಗುಂಟೆ ವಿಜಯೇಂದ್ರಕುಮಾರ ಬಿನ್ ಸಿದ್ದರಾಮಯ್ಯ ಃ ರಾಜಣ್ಣ ಎಂದು ನಮೂದಿರುತ್ತದೆ. ಆ ಪಹಣಿ ಪತ್ರಿಕೆಗಳು ದಾವಾ ಷೆಡ್ಯೂಲ್ ಐಟಂ 1 ಮತ್ತು 2 ರಾಜಣ್ಣ ಬಿನ್ ಕಾಳಪ್ಪ ರವರಿ ಹೆಸರಿನಲ್ಲಿದ್ದು, 3 ಮತ್ತು 4ನೇ ಉಜೇಂದ್ರಕುಮಾರ ಬಿನ್ ಸಿದ್ದರಾಮಯ್ಯ ಉಃ ರಾಜಣ್ಣ ಮತ್ತು ಆತನ ಸಹೋದರ ಮಹೇಂದ್ರಕುಮಾರ್‌ರವರ ಹೆಸರಿನಲ್ಲಿ ಇರುವುದಾಗಿ ಕಂಡುಬರುತ್ತವೆ. ಪ್ರತಿವಾದಿಗಳು ಪಂಚಾಯತ್ ಪಾಲುಪರಿಕತ್ತಿನಂತೆ ಸ್ವತ್ತುಗಳು ವಿಭಾಗ ಆಗಿದೆ ಎಂದು ತಮ್ಮ ಪ್ರತಿವಾದ ಪ್ರತಿವಾದ ಪತ್ರದಲ್ಲಿ ಹೇಳಿದ್ದು ದಾವಾ ಷೆಡ್ಯೂಲ್ ಐಟಂ 1 ಮತ್ತು 2 ಪಹಣಿ ಪತ್ರಿಕೆಗಳು 2013-14 ನೇ ಸಾಲಿನವರೆಗೂ ರಾಜಣ್ಣ ಬಿನ್ ಕಾಳಪ್ಪ ರವರ ಹೆಸರಿನಲ್ಲಿ ಇರುವುದು ಕಂಡುಬರುತ್ತದೆ. ವಾದಿ ಮತ್ತು ಪ್ರತಿವಾದಿಗಳ ನಡುವೆ ದಿನಾಂಕ 04-06-2004, 10-10-1998ರಂದು ವಿಭಾಗ ಆಗಿದೆ ಎಂದು ಪುಷ್ಟಿಕರಿಸುವ ಯಾವುದೇ ದಾಖಲೆಯನ್ನು

ಹಾಜರುಮಾಡದೇ ಇರುವುದರಿಂದ ವಾದಿ ಮತ್ತು ಪ್ರತಿವಾದಿಗಳ ನಡುವೆ ಕಾನೂನುಬದ್ದ ವಿಭಾಗ ಆಗಿದೆ ಎಂದು ತೀರ್ಮಾನಿಸಲು ಸಾಧ್ಯವಿಲ್ಲ.

13. ಉಭಯಪಕ್ಷಕಾರರು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ಪ್ರತಿವಾದಿಗಳು ಹೇಳುವಂತೆ ವಿಭಾಗ ಆಗಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ವಿಭಾಗ ಆಗದೇ ಇರುವುದರಿಂದ ವಾದಿ ಮತ್ತು ಪ್ರತಿವಾದಿಗಳ ಕುಟುಂಬ ಜಂಟಿ ಕುಟುಂಬದ ಸ್ಥಾನಮಾನ ಹೊಂದಿದೆ ಎಂದು ಈ ನ್ಯಾಯಾಲಯ ತೀರ್ಮಾನಕ್ಕೆ ಬಂದಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳೆಂದು ತೋರಿಸಲು ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿದ್ದು, ವಾದಿ ಮತ್ತು ಪ್ರತಿವಾದಿಗಳ ತಂದೆ ಸಿದ್ದರಾಮಯ್ಯ ಉಃ ರಾಜಣ್ಣ ತನ್ನ ತಂದೆ ತಾಯಿಗಳ ಮೂಲಕ ಸ್ವತ್ತನ್ನು ಪಡೆದಿದ್ದಾರೆ ಎಂದು ಸಾಬೀತಾಗಿರುತ್ತದೆ. ಪ್ರತಿವಾದಿಗಳು ಕೂಡಾ ತಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಷೆಡ್ಯೂಲ್ ಸ್ವತ್ತುಗಳೆಲ್ಲವೂ ಪಿತ್ರಾರ್ಜಿತ ಸ್ವತ್ತುಗಳೆಂದು ಒಪ್ಪಿರುವುದರಿಂದ ದಾವಾ ಷೆಡ್ಯೂಲ್ ಸ್ವತ್ತುಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳೆಂದು ಈ ನ್ಯಾಯಾಲಯ ತೀರ್ಮಾನಕ್ಕೆ ಬಂದಿರುತ್ತದೆ.

14. ವಾದಿಗಳ ಪ್ರಕಾರ ಪ್ರತಿವಾದಿಗಳು 2ನೇ ಹೆಂಡತಿಯ ಮಕ್ಕಳುಗಳಾಗಿದ್ದು, 1ನೇ ವಾದಿ ಮತ್ತು ಮೃತ ಲೋಕೇಶ್‌ರವರ ತಾಯಿ ಜೀವಂತ ಇರುವಾಗ ಪ್ರತಿವಾದಿಗಳ ತಾಯಿಯನ್ನು ಅವರ ತಂದೆ ಸಿದ್ದರಾಮಯ್ಯ ಉಃ ರಾಜಣ್ಣ ವಿವಾಹ ಆಗಿರುವುದರಿಂದ ಪ್ರತಿವಾದಿಗಳು ಕಾನೂನುಬದ್ದ ವಿವಾಹ ಸಿದ್ದರಾಮಯ್ಯ ಮತ್ತು ಶಾರದಮ್ಮನವರ ನಡುವೆ ಅಸ್ತಿತ್ವದಲ್ಲಿ ಇರುವಾಗ ಸರೋಜಮ್ಮ ಎಂಬ ಹೆಂಗಸನ್ನು ಸಿದ್ದರಾಮಯ್ಯ ಸಂಪರ್ಕಿಸಿ ಪ್ರತಿವಾದಿಗಳು ಜನಿಸಿರುವುದರಿಂದ ಪ್ರತಿವಾದಿಗಳು ಅನೈತಿಕ ಸಂಪರ್ಕದಿಂದ ಜನಿಸಿರುವ ಮಕ್ಕಳುಗಳೆಂದು ವಾದ ಪತ್ರದಲ್ಲಿ ವಾದಿಸಿರುತ್ತಾರೆ. ಈ ವಿಷಯದ ಕುರಿತಾಗಿ ಮೇಲ್ಕಂಡ 4ನೇ ವಿವಾದಾಂಶವನ್ನು ಈ ನ್ಯಾಯಾಲಯ ರಚನೆ ಮಾಡಿದ್ದು, ವಾದಿಗಳು

ಇದನ್ನು ನ್ಯಾಯಾಲಯದ ಮುಂದೆ ಸಾಬೀತುಪಡಿಸಬೇಕು. ವಾದಿಗಳು ಪ್ರತಿವಾದಿಗಳು ಅನೈತಿಕ ಸಂಪರ್ಕದಿಂದ ಜನಿಸಿದ ಮಕ್ಕಳೆಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಕೊಟ್ಟಿರುವುದಿಲ್ಲ. 1ನೇ ವಾದಿ ಮತ್ತು ಮೃತ ಲೋಕೇಶ್‌ರವರ ತಾಯಿ ಶಾರದಮ್ಮನವರು ಯಾವಾಗ ಮರಣ ಹೊಂದಿದ್ದರೆಂದು ತೋರಿಸುವ ದಾಖಲೆಯನ್ನು ವಾದಿಗಳು ಹಾಜರುಪಡಿಸಿಲ್ಲ. ಸಿದ್ದರಾಮಯ್ಯನವರು ಸರೋಜಮ್ಮನವರನ್ನು ಯಾವ ದಿನಾಂಕದಂದು ಮದುವೆ ಆಗಿದ್ದಾರೆಂದು ತೋರಿಸುವ ದಾಖಲೆಯನ್ನು ಹಾಜರುಮಾಡಿಲ್ಲ. ಪ್ರತಿವಾದಿಗಳ ಪಾಟೀಸವಾಲಿನ ಪುಟ 4 2ನೇ ಸಾಲಿನಲ್ಲಿ ಪ್ರಾಸಾ 1ರವರು **"1ನೇ ವಾದಿಯ ತಾಯಿ ತೀರಿ ಹೋದ ದಿನಾಂಕ ಗೊತ್ತಿಲ್ಲ, 1ನೇ ವಾದಿಯ ತಾಯಿ ತೀರಿಹೋದ ನಂತರ ನಮ್ಮ ತಂದೆ 2ನೇ ಮದುವೆ ಆದರೆಂದು ಒಪ್ಪಿರುತ್ತಾರೆ. 1ನೇ ವಾದಿ ಮತ್ತು ಮೃತ ಲೋಕೇಶ ಮೊದಲನೆ ಹೆಂಡತಿ ಮಕ್ಕಳೆಂದು ಮತ್ತು ಪ್ರತಿವಾದಿಗಳು 2ನೇ ಹೆಂಡತಿಯ ಮಕ್ಕಳೆಂದು ಒಪ್ಪಿರುತ್ತಾರೆ".** ಪಾಟೀಸವಾಲಿನಲ್ಲಿ ಹೊರಬಂದಿರುವ ಈ ಮೌಖಿಕ ಸಾಕ್ಷ್ಯ ಹಿನ್ನೆಲೆಯಲ್ಲಿ ಮೃತ ಸಿದ್ದರಾಮಯ್ಯ ಉಃ ರಾಜಣ್ಣನವರು 2ನೇ ಹೆಂಡತಿಯನ್ನು ಮೊದಲನೇ ಹೆಂಡತಿ ತೀರಿ ಹೋದ ನಂತರ ಮದುವೆ ಆಗಿದ್ದಾರೆ ಎಂದು ಸಾಬೀತಾಗಿರುತ್ತದೆ. ಅಂದರೆ ವಾದಿಗಳು ದಾವೆಯಲ್ಲಿ ಹೇಳಿರುವಂತೆ ಪ್ರತಿವಾದಿಗಳು ಅನೈತಿಕ ಸಂಬಂಧದ ಮಕ್ಕಳುಗಳೆಂದು ವಾದಿಗಳು ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ಮೇಲ್ಕಂಡ **ವಿವಾದಾಂಶ 1 ಮತ್ತು 4 ಕ್ಕೆ ನಕರಾತ್ಮಕವಾಗಿ ಉತ್ತರಿಸಿರುತ್ತದೆ.**

**15. ವಿವಾದಾಂಶ 2, 3 ಮತ್ತು 5ಕ್ಕೆಃ** ಈ ಎಲ್ಲಾ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ ವಸ್ತು ಸ್ಥಿತಿ ಮತ್ತು ಸಾಕ್ಷ್ಯ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಎಲ್ಲಾ ವಿವಾದಾಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಂಡಿರುತ್ತೇನೆ.

16. ವಾದಿಗಳು ಈ ದಾವೆಯನ್ನು ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿಗಳು ಹೊಂದಿರುವ ಕಾನೂನುಬದ್ದ ಹಿಸ್ಸೆಯನ್ನು ಪ್ರತ್ಯೇಕಿಸಿ ಸ್ವಾದೀನಕೊಡಿಸಬೇಕಾಗಿ ಹಾಗೂ 3ನೇ ಪ್ರತಿವಾದಿಯು 1ನೇ

ಪ್ರತಿವಾದಿಗಳೇ ಬರೆದುಕೊಟ್ಟಿರುವ ಕ್ರಯಪತ್ರ ವಾದಿಗಳ ಭಾಗಾಂಶ ಹಕ್ಕಿಗೆ ಬದ್ದಪಡಿಸುವುದಿಲ್ಲ ಎಂದು ವಾದ ಪತ್ರದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿರುವಂತೆ ಕೋರಿ ದಾವೆಯನ್ನು ಸಲ್ಲಿಸಿದ್ದಾರೆ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರ ಸಲ್ಲಿಸಿದ್ದು, ವಾದಿಗಳ ಸಂಪೂರ್ಣ ಕ್ಲೇಮನ್ನು ನಿರಾಕರಿಸಿರುತ್ತಾರೆ ಹಾಗೂ ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ದಿನಾಂಕ 10/10/1998ರಂದು ಹಾಗೂ ದಿನಾಂಕ 04/06/2004 ರಂದು ವಿಭಾಗ ಆಗಿದ್ದು ಭಾಗ ತೆಗೆದುಕೊಂಡಿದ್ದಾರೆ. ಆ ದಾಖಲೆಯ ನೆಲೆಯಲ್ಲಿ ಕಂದಾಯ ದಾಖಲಾತಿಗಳನ್ನು ಬದಲಾವಣೆ ಮಾಡಿಕೊಂಡು ಸ್ವಾದೀನ ಹೊಂದಿ, 8ನೇ ಪ್ರತಿವಾದಿಯು ತನ್ನ ಕಾನೂನುಬದ್ದ ಅಗತ್ಯತೆಗಾಗಿ, 1ನೇ ಪ್ರತಿವಾದಿಗೆ ಮರಾಟ ಮಾಡಿರುತ್ತಾರೆ. ವಾದಿಗಳು ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ವಿಭಾಗ ಆಗಿರುವುದರಿಂದ ಪುನಃ ವಿಭಾಗ ಮಾಡಬೇಕಾದ ಅಗತ್ಯತೆ ಇಲ್ಲ ಎಂದು ಸ್ಪಷ್ಟ ಪ್ರತಿರಕ್ಷಣೆ ತೆಗೆದುಕೊಂಡಿರುತ್ತಾರೆ. ಇದನ್ನು ನ್ಯಾಯಾಲಯದ ಮುಂದೆ ಸಾಬೀತುಪಡಿಸಲು 1ನೇ ಪ್ರತಿವಾದಿಯಿಂದ ಅಧಿಕಾರ ಪತ್ರ ಪಡೆದ ಅವರ ಖಾಸಾ ಮಗ ಅರುಣ್‌ಕುಮಾರ್ ಎಂಬುವರು ಪ್ರತಿವಾದ ಪತ್ರದ ಸಂಗತಿಗಳನ್ನು ಪುನರುಚ್ಚರಿಸಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ದಾವೆಯ ವಿಚಾರಣಾ ಕಾಲದಲ್ಲಿ 1ನೇ ಪ್ರತಿವಾದಿಯು ಮರಣ ಹೊಂದಿದ್ದು, 1ನೇ ಪ್ರತಿವಾದಿಯ ಕಾನೂನುಬದ್ದ ವಾರುಸದಾರರನ್ನು ಕಡತದ ಮೇಲೆ ತರಲಾಗಿರುತ್ತದೆ. ಡಿಡಬ್ಲ್ಯೂ-1ರವರು ಡಿ1(ಬಿ) ಆಗಿ 1ನೇ ಪ್ರತಿವಾದಿಯ ವಾರಸುದಾರರಾಗಿ ಕಡತದ ಮೇಲೆ ಬಂದು ಸಾಕ್ಷಿ ನುಡಿದಿರುತ್ತಾರೆ. ತಮ್ಮ ಪರವಾಗಿ ನಿಡಿ 1 ರಿಂದ ನಿಡಿ 10 ದಾಖಲಾತಿಗಳನ್ನು ತಮ್ಮ ಪರ ದಾಖಲಾತಿಗಳನ್ನಾಗಿ ಗುರುತಿಸಿಕೊಂಡಿದ್ದಾರೆ.

17. ಪ್ರತಿವಾದಿಗಳು ಹಾಜರುಪಡಿಸಿರುವ ದಾಖಲಾತಿಗಳನ್ನು ನ್ಯಾಯಾಲಯ ಕೂಲಂಕುಷವಾಗಿ ಪರಾಮರ್ಶಿಸಿದಾಗ ಕಂಡುಬರುವುದೇನೆಂದರೆ 1 ಮತ್ತು 2ನೇ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವಂತೆ ದಿನಾಂಕ 10/10/1998 ಮತ್ತು ದಿನಾಂಕ 04/06/2004ರಂದು ಲಿಖಿತ ದಾಖಲಾತಿಯ ಮೂಲಕ ವಿಭಾಗ ಆಗಿರುವ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಕಂದಾಯ ದಾಖಲಾತಿಗಳಲ್ಲಿಯೂ ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ವಿಭಾಗ ಆಗಿರುವ ಪಾಲುಪರಿಕತ್ತಿನ

ಬಗ್ಗೆ ನಮೂದು ಇರುವುದಿಲ್ಲ. ನಿಡಿ 4 ನೊಂದಾಯಿತ ಕ್ರಯಪತ್ರ ಆಗಿದ್ದು, ದಿನಾಂಕ 06/05/2003ರಂದು 1ನೇ ಪ್ರತಿವಾದಿಗೆ 3ನೇ ಪ್ರತಿವಾದಿ ತನ್ನ ಮೈನರ್ ಮಕ್ಕಳ ಪರವಾಗಿ ದಕ್ಷಿಣ ನಾಲಾ ಗ್ರಾಮದ ಸರ್ವೆ ನಂ.120/1ಎನಲ್ಲಿ 15-1/2 ಗುಂಟೆ ಜಮೀನನ್ನು 41,000/- ರೂಗಳಿಗೆ ಮಾರಾಟ ಮಾಡಿರುವುದಾಗಿ ಕಂಡುಬರುತ್ತದೆ. **ನಿಡಿ 4 ಮತ್ತು 5 ರ ಒಕ್ಕಣೆಯಲ್ಲಿ ಆ ಸ್ವತ್ತು 3ನೇ ಪ್ರತಿವಾದಿಗೆ ಹೇಗೆ? ಯಾವ ದಾಖಲೆಯ ಆಧಾರದಲ್ಲಿ ಬಂದಿತ್ತು ಎಂಬುದನ್ನು ನಮೂದಿಸಿಲ್ಲ. ಇದರಿಂದ ನ್ಯಾಯಾಲಯಕ್ಕೆ ಸ್ಪಷ್ಟ ಆಗುವುದೇನೆಂದರೆ ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ಕಾನೂನುಬದ್ದ ಲಿಖಿತ ಹಿಸ್ಸೆಯಾಗದೇ 3ನೇ ಪ್ರತಿವಾದಿ, 1ನೇ ಪ್ರತಿವಾದಿಗೆ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿರುವುದಾಗಿ ಕಂಡುಬರುತ್ತದೆ. ನಿಡಿ 4 ಮತ್ತು 5 ಒಂದೇ ದಾಖಲೆಯಾಗಿದ್ದು, ಈ ದಾಖಲೆಗಳನ್ನು 1ನೇ ಪ್ರತಿವಾದಿ ಮಾಡಿಕೊಡಲು 3ನೇ ಪ್ರತಿವಾದಿಗೆ ಸಂಪೂರ್ಣ ಹಕ್ಕು ಇರುವುದಿಲ್ಲ. ಅವಿಭಕ್ತ ಕುಟುಂಬದ ಸ್ವತ್ತುಗಳೆಂದು ಸ್ವತಃ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ಒಪ್ಪಿರುವುದರಿಂದ ಪ್ರತಿಯೊಬ್ಬ ಭಾಗದಾರರು ಪ್ರತಿಯೊಂದು ಇಂಚು ಆಸ್ತಿಗೂ ಸಮಾನ ಹಕ್ಕುದಾರರು ಆಗಿರುತ್ತಾರೆ. 3ನೇ ಪ್ರತಿವಾದಿ ಒಬ್ಬರೇ ಮಾರಾಟ ಮಾಡಲು ಹಕ್ಕು ಹೊಂದಿಲ್ಲ.** ಡಿಡಬ್ಲ್ಯೂ-1ರವರ ಪಾಟೀಸವಾಲಿನ ಪುಟ 6ರ 22 ನೇ ಸಾಲಿನಲ್ಲಿ **"ದಿನಾಂಕ 04/06/2004ರಂದು ಆಗಿರುವ ಪಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಾಗಿ ಹಾಗೂ ಅದಕ್ಕೆ ಸಿದ್ದರಾಮಯ್ಯ ಉಃ ರಾಜಣ್ಣ, ಮೃತ ಲೋಕೇಶ ಮತ್ತು 3ನೇ ಪ್ರತಿವಾದಿ ಸಹಿ ಮಾಡಿರುವುದಾಗಿ ಸಾಧಿಸಿರುತ್ತಾರೆ".** ಆದರೆ ಆ ಪಾಲುಪಟ್ಟಿಯನ್ನು 1 ಮತ್ತು 2ನೇ ಪ್ರತಿವಾದಿಗಳು ಹಾಜರುಪಡಿಸಿರುವುದಿಲ್ಲ. ಹಾಗೂ ಪಾಟೀಸವಾಲಿನ ಪುಟ 7ರ 4ನೇ ಸಾಲಿನಲ್ಲಿ **ಮೂಲ ಪಾಲುಪಟ್ಟಿ ನ್ಯಾಯಾಲಯದ ಕಡತದಲ್ಲಿ ಕಾಣುತ್ತಿಲ್ಲ ಎಂದು ಸಾಕ್ಷಿಯೇ ಸ್ವತಃ ದಾಖಲೆಗಳನ್ನು ಪರಾಮರ್ಶಿಸಿ ನುಡಿದಿರುತ್ತಾರೆ.** ಇದರಿಂದ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ತೆಗೆದುಕೊಂಡ ಸ್ಪಷ್ಟ ಪ್ರತಿರಕ್ಷಣೆಯನ್ನು ಸಾಕ್ಷ್ಯಾಧಾರಗಳ ಮೂಲಕ ಸಾಬೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಮೂಲ ಪಾಲುಪಟ್ಟಿ ನ್ಯಾಯಾಲಯದ ಮುಂದೆ ಹಾಜರುಪಡಿಸದೇ ಡಿಡಬ್ಲ್ಯೂ-2

ರವರನ್ನು ವಿಚಾರಣೆ ಮಾಡಿಸಿ, ಪಾಲುಪಟ್ಟಿ ಆಗಿದೆ ಮೌಖಿಕ ಸಾಕ್ಷಿ ನುಡಿಯಲು ಪ್ರಯತ್ನಿಸಿರುತ್ತಾರೆ. ಆದರೆ ಲಿಖಿತ ದಾಖಲೆ ಹಾಜರುಪಡಿಸದೇ ಎಷ್ಟೆ ಸಂಖ್ಯೆಯ ಸಾಕ್ಷಿದಾರರನ್ನು ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಸಿದರೂ ಸಾಕ್ಷ್ಯ ಅಧಿನಿಯಮದ ಅನ್ವಯ ಸ್ವಿಕಾರರ್ಹವಾದ ಸಾಕ್ಷ್ಯವಾಗುವುದಿಲ್ಲ. ಪ್ರತಿವಾದಿಗಳು ತಮ್ಮ ಪ್ರತಿವಾದಪತ್ರದಲ್ಲಿ ತೆಗೆದುಕೊಂಡಿರುವ ಪಾಲುಪಾರಿಕತ್ತುಗಳನ್ನು ದಾಖಲೆಗಳ ಮೂಲಕ ಸಾಬೀತುಪಡಿಸಿರುವುದಿಲ್ಲ. ಪ್ರತಿವಾದಿಗಳು ದಿನಾಂಕ 13/12/2018 ರಂದು ಮಧ್ಯಂತರ ಅರ್ಜಿ 11 ರಿಂದ 13 ಗಳನ್ನು ಸಲ್ಲಿಸಿ ಅದರೊಂದಿಗೆ ದಿನಾಂಕ 30/07/2001ರಂದು ಆಗಿರುವ ನೊಂದಣಿಯಲ್ಲದ ವಿಭಾಗ ಪತ್ರ ಹಾಜರುಪಡಿಸಿ, ಆ ದಾಖಲೆಯನ್ನು ಕಡತದ ಮೇಲೆ ತೆಗೆದುಕೊಂಡು ನಿಶಾನೆಗೊಳಿಸಿಕೊಳ್ಳಲು ಅನುಮತಿ ಕೋರಿರುತ್ತಾರೆ. ವಾದಿಗಳ ತಕರಾರನ್ನು ಪಡೆದುಕೊಂಡು ವಾದ ವಿವಾದಗಳನ್ನು ಆಲಿಸಿ ಈ ನ್ಯಾಯಾಲಯ ದಿನಾಂಕ 14/01/2009ರಂದು ಗುಣಾವಗುಣಗಳ ಮೇಲೆ ಸೂಕ್ತ ಕಾರಣಗಳನ್ನು ನೀಡಿ ವಜಾ ಮಾಡಿರುತ್ತದೆ. 1 ಮತ್ತು 2ನೇ ಪ್ರತಿವಾದಿಗಳು ಈ ದಾಖಲೆಗಳು ತನ್ನ ಪ್ರತಿವಾದ ಪತ್ರದಲ್ಲಿ ನಿರ್ದಿಷ್ಟ ಪ್ರತಿರಕ್ಷಣೆ ತೆಗೆದುಕೊಳ್ಳದೇ ಉಭಯಪಕ್ಷಕಾರರ ವಿಚಾರಣೆ ಮುಗಿದ ನಂತರ ದಿನಾಂಕ 30/07/2001ರಂದು ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ವಿಭಾಗ ಆಗಿದೆ ಎಂದು ಈ ದಾಖಲೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದ ಪತ್ರದಲ್ಲಿ ಪ್ರತಿವಾದಿಗಳು ದಿನಾಂಕ 10/10/1998, ದಿನಾಂಕ 04/06/2004, ದಿನಾಂಕ 03/08/2001ರ ಒಪ್ಪಿಗೆ ಪತ್ರಗಳಂತೆ ಖಾತೆ ಮಾಡಿಸಿಕೊಂಡಿರುವುದಾಗಿ ಹಾಗೂ ವಿಭಾಗ ಆಗಿರುವುದಾಗಿ ದಿನಾಂಕ 16/01/2014 ರಂದು ಸಲ್ಲಿಸಿದ್ದು, ದಿನಾಂಕ 13/12/2018ರಂದು ದಿನಾಂಕ 30/07/2001ರಂದು ವಿಭಾಗ ಪತ್ರ ಆಗಿದೆ ಎಂದು ಏಕಾಏಕಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಆದ್ದರಿಂದ ಆ ದಾಖಲೆಯನ್ನು ಕಡತದ ಮೇಲೆ ತೆಗೆದುಕೊಂಡಿಲ್ಲ.

18. ವಾದಿಗಳು ಈ ದಾವೆಯಲ್ಲಿ ಪ್ರತಿವಾದಿಗಳು ಕುಟುಂಬದ ಮೂಲ ಪುರುಷ ಸಿದ್ದರಾಮಯ್ಯ ಉಃ ರಾಜಣ್ಣನವರ ಅನೈತಿಕ ಸಂಪರ್ಕದಿಂದ ಜನಿಸಿರುವ ಮಕ್ಕಳುಗಳಾಗಿದ್ದು, ಅವರುಗಳಿಗೆ ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಹಕ್ಕು ಹೊಂದಿಲ್ಲ ಎಂದು ಘೋಷಣೆ ಮಾಡಬೇಕಾಗಿ ವಾದ

ಪತ್ರದಲ್ಲಿ ಕೋರಿ ಅವರ ಪರ ವಕೀಲರು ಕರ್ನಾಟಕ ಉಚ್ಛ ನ್ಯಾಯಾಲಯದ ನಿರ್ದರಿತ ಪ್ರಕರಣವಾದ ರೇವಣ್ಣಸಿದ್ದಪ್ಪ ವಿರುದ್ದ ಮಲ್ಲಿಕಾರ್ಜುನ ಸ್ವಾಮಿ ಪ್ರಕರಣದಂತೆ ಅನೈತಿಕ ಸಂಬಂದದಿಂದ ಹುಟ್ಟಿದ ಮಕ್ಕಳುಗಳಿಗೆ ಯಾವುದೇ ಆಸ್ತಿ ಹಕ್ಕು ಹೊಂದಿಲ್ಲ ಎಂದು ದೀರ್ಘ ವಾದಿಸಿರುತ್ತಾರೆ. ಈ ಸಂಗತಿಯು ಸಂಪೂರ್ಣವಾಗಿ ಕಾನೂನಿಗೆ ಸಂಬಂಧಿಸಿದ ವಿಷಯವಾಗಿದ್ದು, ಅನೈತಿಕ ಸಂಬಂದದಿಂದ ಹುಟ್ಟಿದ ಮಕ್ಕಳ ಪ್ರಸ್ತುತ ಆಸ್ತಿ ಹಕ್ಕು ಏನೆಂದು ನೋಡಬೇಕಾದ ಅಗತ್ಯತೆ ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಸರ್ವೋಚ್ಛ ನ್ಯಾಯಾಲಯದ ನಿರ್ದರಿತ ತೀರ್ಪನ್ನು ಅವಲಂಬಿಸಿ ಚರ್ಚೆಗೆ ತೆಗೆದುಕೊಂಡಿರುತ್ತದೆ.

The Supreme Court has held that under the Hindu Marriage Act (HMA), illegitimate children are entitled to all rights in the property of their parents, both self-acquired and ancestral.

A Bench of Justices G.S. Singhvi and A.K. Ganguly, hearing an appeal by Revanasiddappa, differed with earlier judgments in interpreting Section 16 (3) of the HMA that "such children are only entitled to the property of their parents and not of any other relation."

Stating that it was constrained to take a different view, the Bench referred the matter to Chief Justice S.H. Kapadia for posting it before a larger Bench. The Bench said, "The relationship between the parents may not be sanctioned by law but the birth of a child in such relationship has to be viewed independently of the relationship of the parents. A child born in such relationship is innocent and is entitled to all the rights, which are given to other children born in valid marriage. This is the crux of Section 16 (3)."

Writing the judgment, Justice Ganguly said that under Section 16 (1) and 16 (2), it was expressly declared that children

born in a void or voidable marriage, (viz. second marriage) should be legitimate.

"If they were declared legitimate, then they cannot be discriminated against and they will be on a par with other legitimate children and be entitled to all the rights in the property of their parents, both self-acquired and ancestral."

The Bench said: "the prohibition contained in Section 16 (3) will apply to such children with respect to property of any person other than their parents. We find it interesting to note that the legislature has advisedly used the word 'property' and has not qualified it with either self-acquired property or ancestral property. It has been kept broad and general."

Underlining the need for a liberal interpretation of Section 16 (3), the Bench said: "with changing social norms of legitimacy in every society, including ours, what was illegitimate in the past may be legitimate today. The concept of legitimacy stems from social consensus, in the shaping of which various social groups play a vital role."

Quoting an earlier judgment, the Bench said: "the HMA intends to bring about social reforms and conferment of social status of legitimacy on innocent children is the obvious purpose of Section 16. This is a law to advance the socially beneficial purpose of removing the stigma of illegitimacy on such children who are as innocent as any other children."

"However, one thing must be made clear that the benefit given under the amended Section 16 is available only in cases

where there is a marriage but such marriage is void or voidable. In the case of joint family property, such children will be entitled only to a share in their parents' property but they cannot claim it on their own right. Logically, on the partition of an ancestral property, the property falling in the share of the parents of such children is regarded as their self-acquired and absolute property."

The Bench quoted Article 39 (f) of the Constitution which says "that children are given opportunities and facilities to develop in a healthy manner and in conditions of freedom and dignity and that childhood and youth are protected against exploitation and against moral and material abandonment. Right to property is no longer fundamental but it is a constitutional right and Article 300A contains a guarantee against deprivation of property right by authority of law."

Since there was no restriction imposed in Section 16 (3), such children would have a right to whatever "becomes the property of their parents whether self-acquired or ancestral," the Bench said.

ಶ್ರೇಷ್ಟ ನ್ಯಾಯಾಲಯವು ಈ ಪ್ರಕಣದಲ್ಲಿ ಸ್ಪಷ್ಟಪಡಿಸಿರುವಂತೆ ಹಿಂದೂ ವಿವಾಹ ಕಾಯ್ದೆ ಕಲಂ 16(3) ರಲ್ಲಿ ಅನೈತಿಕ ಸಂಬಂದದಿಂದ ಜನಿಸಿದ ಮಕ್ಕಳು ಕೂಡಾ ಕಾನೂನುಬದ್ದ ಮಕ್ಕಳೆಂದು ಸ್ಥಾನಮಾನ ನೀಡಿದ್ದು, ಮತ್ತು ತಂದೆ ತಾಯಿಗಳ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಆಸ್ತಿಗಳಲ್ಲಿ ಆ ಮಕ್ಕಳಿಗೆ ಸಮಾನ ಹಕ್ಕು ಹೊಂದಿದ್ದಾರೆ ಎಂದು ಸ್ಪಷ್ಟಪಡಿಸಿರುವುದರಿಂದ ಅನೈತಿಕ ಸಂಬಂದದಿಂದ ಹುಟ್ಟಿದ ಮಕ್ಕಳು ತಂದೆ ತಾಯಿಗಳ ಎಲ್ಲಾ ಆಸ್ತಿಗಳಲ್ಲಿ ಹಕ್ಕು ಹೊಂದಿದ್ದಾರೆ ಎಂಬುದು ಸ್ಪಷ್ಟವಾಗಿರುತ್ತದೆ.

19. ಈ ದಾವೆಯಲ್ಲಿ ಪ್ರಾಸಾ 1ರವರು ಪಾಟೀಸವಾಲಿನಲ್ಲಿ ಮೊದಲ ಹೆಂಡತಿ ಶಾರದಮ್ಮನವರು ಮರಣ ಹೊಂದಿದ ನಂತರ ಸರೋಜಮ್ಮರವರನ್ನು ಮೃತ ಸಿದ್ದರಾಮಯ್ಯ ಉಃ ರಾಜಣ್ಣ ಮದುವೆ ಆದರೆಂದು ಒಪ್ಪಿರುತ್ತಾರೆ. ವಾದಿ ಪರ ವಕೀಲರು ವಾದಿಸಿರುವಂತೆ ಪ್ರತಿವಾದಿಗಳು ಮೃತ ಸಿದ್ದರಾಮಯ್ಯ ಉಃ ರಾಜಣ್ಣ ಸರೋಜಮ್ಮರವರ ಅಕ್ರಮ ಸಂಬಂಧದಿಂದ ಜನಿಸಿದ ಮಕ್ಕಳೆಂದು ವಾದಿಗಳು ನ್ಯಾಯಾಲಯದ ಮುಂದೆ ಯಾವುದೇ ದಾಖಲೆಯನ್ನು ನೀಡಿ ಸಾಬೀತುಪಡಿಸಿರುವುದಿಲ್ಲ. ಆದ್ದರಿಂದ ವಾದಿಗಳ ಪರ ವಕೀಲರ ವಾದವನ್ನು ಈ ನ್ಯಾಯಾಲಯ ತಿರಸ್ಕರಿಸಿರುತ್ತದೆ. ಹಾಗೂ ವಾದಿಗಳು ತಮ್ಮ ವಾದ ಪತ್ರದಲ್ಲಿ ತೆಗೆದುಕೊಂಡಿರುವಂತೆ ಪ್ರತಿವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಮತ್ತು ಅಧಿಕಾರ ಹೊಂದಿಲ್ಲ ಎಂಬುದನ್ನು ಸಾಕ್ಷ್ಯಾದಾರಗಳಿಂದ ಸಾಬೀತುಪಡಿಸುವಲ್ಲಿ ವಿಫಲರಾಗಿರುವುದರಿಂದ ಹಾಗೂ ಪ್ರತಿವಾದಿಗಳು ಮೃತ ಸಿದ್ದರಾಮಯ್ಯ ಉಃ ರಾಜಣ್ಣ ಮತ್ತು ಸರೋಜಮ್ಮರವರ ಮಕ್ಕಳೆಂಬುದು ನ್ಯಾಯಾಲಯದ ಮುಂದೆ ಸಾಬೀತಾಗಿರುವುದರಿಂದ ಪ್ರತಿವಾದಿಗಳು ಸಹ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಸಮಾನ ಹಿಸ್ಸೆ ಹೊಂದುವ ಹಕ್ಕನ್ನು ಹೊಂದಿರುತ್ತಾರೆ.

20. ಒಟ್ಟಿನಲ್ಲಿ ಈಗ ಮೇಲೆ ವಿವರವಾಗಿ ಚರ್ಚಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಪ್ರತಿವಾದಿಗಳು ಯಾವುದೇ ಲಿಖಿತ ದಾಖಲೆಯನ್ನು ಕೊಟ್ಟು ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ವಿಭಾಗ ಆಗಿದೆ ಎಂದು ಸಾಬೀತುಪಡಿಸಿರುವುದಿಲ್ಲ. ಪಕ್ಷಕಾರರ ನಡುವೆ ವಿಭಾಗ ಆಗದೇ ಕ್ರಯಪತ್ರವನ್ನು 3ನೇ ಪ್ರತಿವಾದಿ 1ನೇ ಪ್ರತಿವಾದಿಗೆ ಬರೆದುಕೊಟ್ಟಿರುವುದರಿಂದ 3ನೇ ಪ್ರತಿವಾದಿಯ ಕ್ರಯಪತ್ರ ಊರ್ಜಿತವಾದುದ್ದಲ್ಲ. ವಾದಿಗಳು ಮತ್ತು ಪ್ರತಿವಾದಿಗಳೆಲ್ಲರಿಗೂ ದಾವಾ ಆಸ್ತಿಯಲ್ಲಿ ಸಮಾನ ಹಿಸ್ಸೆ ಹಕ್ಕು ಇರುವುದರಿಂದ ಕ್ರಯಪತ್ರವನ್ನು ಪಡೆದುಕೊಡಲು 3ನೇ ಪ್ರತಿವಾದಿ ಮತ್ತು ಮೃತ ಲೋಕೇಶ್‌ನಿಗೆ ಸ್ವತಂತ್ರ ಹಕ್ಕು ಪ್ರಾಪ್ತವಾಗುವುದಿಲ್ಲ ಹಾಗೂ ಆ ಕ್ರಯಪತ್ರಗಳ ನೆಲೆಯಲ್ಲಿ 1ನೇ ಪ್ರತಿವಾದಿ ಪಡೆದಿರುವ ಸ್ವತ್ತುಗಳ ಮೇಲೆ 1ನೇ ಪ್ರತಿವಾದಿಗೆ ಪೂರ್ಣ ಪ್ರಮಾಣದ ಹಕ್ಕು ಪ್ರಾಪ್ತ ಆಗಿರುವುದಿಲ್ಲ. ವಾದಿಗಳ ಮತ್ತು ಪ್ರತಿವಾದಿಗಳ ಮೂಲ ತಂದೆ ಸಿದ್ದರಾಮಯ್ಯ ಉಃ ರಾಜಣ್ಣರವರು

ದಿನಾಂಕ 26/02/2013ರಂದು ಮರಣ ಹೊಂದಿರುವುದಾಗಿ ವಾದ ಪತ್ರದ 2ನೇ ಕಂಡಿಕೆಯಲ್ಲಿ ಹೇಳಿದ್ದು ಅದನ್ನು ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ವಾದ ಪತ್ರದ 2ನೇ ಕಂಡಿಕೆಯ ಸಂಗತಿಗಳು ಬಹುತೇಕ ಸರಿಯಾಗಿವೆ ಎಂದು ಒಪ್ಪಿರುವುದರಿಂದ ಕುಟುಂಬದ ಮೂಲಪುರುಷ ಸಿದ್ದರಾಮಯ್ಯ ಉಃ ರಾಜಣ್ಣ 26/02/2013ರಂದು ಮರಣ ಹೊಂದಿದ್ದಾರೆಂದು ಒಪ್ಪಬಹುದು. ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ಕಾಯ್ದೆ 2005. 09/09/2005ರಂದು ಜಾರಿಗೆ ಬಂದಿದ್ದು, ತಂದೆ ಮತ್ತು ಹೆಣ್ಣು ಮಕ್ಕಳು ಜೀವಂತ ಇರುವುದರಿಂದ ಹಾಗೂ ವಾದಿಗಳು ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಕಾನೂನುಬದ್ದ ವಿಭಾಗ ಪತ್ರ ಆಗಿಲ್ಲ ಎಂದು ಈ ನ್ಯಾಯಾಲಯದ ತೀರ್ಮಾನಕ್ಕೆ ಬಂದಿರುವುದರಿಂದ 1ನೇ ವಾದಿ ಹಾಗೂ 2ನೇ ಪ್ರತಿವಾದಿಯು ಗಂಡು ಮಕ್ಕಳಿಗೆ ಸಮಾನಾದ ಹಿಸ್ಸೆ ಹಕ್ಕನ್ನು ಹೊಂದಲು ಅರ್ಹರಿರುತ್ತಾರೆ. 1 ಮತ್ತು 2ನೇ ಪ್ರತಿವಾದಿಗಳ ಪರ ವಕೀಲರು 1ನೇ ವಾದಿಗೆ 60 ವರ್ಷಕ್ಕಿಂತಲೂ ಹೆಚ್ಚಿನ ವಯಸ್ಸಾಗಿದ್ದು, ದಾವೆಯನ್ನು ದಾಖಲು ಮಾಡುವ ಉದ್ದೇಶಕ್ಕಾಗಿ ಅವರ ವಯಸ್ಸನ್ನು ಕಡಿಮೆ ತೋರಿಸಿ ದಾಖಲಿಸಿದ್ದಾರೆಂದು ತಮ್ಮ ವಾದ ಮಂಡನೆಯಲ್ಲಿ ವಾದಿಸಿರುತ್ತಾರೆ. ಆದರೆ ಅದನ್ನು ನ್ಯಾಯಾಲಯೂದ ಮುಂದೆ ಪುಷ್ಟೀಕರಿಸಲು ಯಾವುದೇ ವಿಶ್ವಾಸರ್ಹ ದಾಖಲೆಗಳನ್ನು ಪ್ರತಿವಾದಿಗಳು ಹಾಜರುಪಡಿಸಿ 1ನೇ ವಾದಿಯ ವಯಸ್ಸನ್ನು ಸಾಬೀತುಪಡಿಸಿರುವುದಿಲ್ಲ. ಈ ಸಂಗತಿಯನ್ನು 1 ಮತ್ತು 2ನೇ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಇದರ ಕುರಿತಾಗಿ 1 ಮತ್ತು 3ನೇ ಪ್ರತಿವಾದಿಗಳ ಪರ ವಕೀಲರು ಮಂಡಿಸಿದ ವಾದ ಮಂಡನೆಯನ್ನು ಈ ನ್ಯಾಯಾಲಯ ಪುರಸ್ಕರಿಸಲು ಸಕಾರಣಗಳಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳು ಮೃತ ಸಿದ್ದರಾಮಯ್ಯ ಉಃ ರಾಜಣ್ಣ ರವರಿಗೆ ಪಿತ್ರಾರ್ಜಿತ ಸ್ವತ್ತುಗಳೆಂದು ಸಾಬೀತಾಗಿದ್ದು, ಮತ್ತು ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ಕಾನೂನುಬದ್ದ ವಿಭಾಗ ಆಗಿಲ್ಲ ಎಂದು ಈ ನ್ಯಾಯಾಲಯ ತೀರ್ಮಾನಕ್ಕೆ ಬಂದಿರುತ್ತದೆ. ವಾದಿಗಳು ಮತ್ತು ಪ್ರತಿವಾದಿಗಳ ಕುಟುಂಬಗಳು ಒಟ್ಟು ಕುಟುಂಬದ ಸ್ಥಾನಮಾನವನ್ನು ಹೊಂದಿದ್ದು, ಅವರುಗಳ ನಡುವೆ ನೊಂದಾಯಿತ ವಿಭಾಗ ಆಗಿಲ್ಲ. 1ನೇ ವಾದಿ ಮೃತ ಲೋಕೇಶ ಹಾಗೂ ಮೃತ 1ನೇ ಪ್ರತಿವಾದಿ 2 ಮತ್ತು 3ನೇ ಪ್ರತಿವಾದಿಗಳು ಮೃತ ಸಿದ್ದರಾಮಯ್ಯ ಉಃ ರಾಜಣ್ಣನವರ ಮಕ್ಕಳುಗಳಾಗಿದ್ದು, ಹಾಗೂ ಸರೋಜಮ್ಮ ಎಂಬುವರು ಮೃತ

ಸಿದ್ದರಾಮಯ್ಯ ಉಃ ರಾಜಣ್ಣನವರ 2ನೇ ಹೆಂಡತಿ ಆಗಿದ್ದು, ಅವರು ಈಗಲೂ ಜೀವಂತ ಇದ್ದಾರೆಂದು ಸಾಕ್ಷ್ಯದಲ್ಲಿ ಮೂಡಿಬಂದಿದೆ. ಅವರನ್ನು ಈ ದಾವೆಯಲ್ಲಿ ವಾದಿಗಳು ಸೇರಿಸದೇ ದಾವೆ ಸಲ್ಲಿಸಿದ್ದಾರೆ. ಸರೋಜಮ್ಮನವರು ಮೃತ ಸಿದ್ದರಾಮಯ್ಯ ಉಃ ರಾಜಣ್ಣ ನವರ ಹೆಂಡತಿಯಾಗಿದ್ದು, ಈಗ ವಿಧವೆಯಾಗಿದ್ದಾರೆ. ತನ್ನ ಗಂಡ ಹೊಂದಿದ್ದ ಆಸ್ತಿಗಳ ಮೇಲೆ ಸರೋಜಮ್ಮನವರು ಕೂಡಾ ತನ್ನ ಮಕ್ಕಳಿಗೆ ಸರಿಸಮನಾಗಿ ಆಸ್ತಿ ಹಕ್ಕನ್ನು ಹೊಂದಿದ್ದಾರೆ. ವಾದಿಗಳು ಈ ದಾವೆಯಲ್ಲಿ ಅರ್ಧ ಹಿಸ್ಸೆಯ ಆಸ್ತಿಯನ್ನು ನೀಡಬೇಕೆಂದು ದಾವೆಯಲ್ಲಿ ಕೋರಿದ್ದಾರೆ. ಆದರೆ ವಾದಿಗಳು ಕೋರಿರುವಂತೆ ಅರ್ಧ ಹಿಸ್ಸೆ ಹಕ್ಕು ಹೊಂದಲು ವಾದಿಗಳಿಗೆ ಕಾನೂನಿನಲ್ಲಿ ಅವಕಾಶ ಇರುವುದಿಲ್ಲ. ವಾದಿ ಪರ ವಕೀಲರು ವಾದಿಗಳು ಹೇಗೆ ಅರ್ಧ ಹಿಸ್ಸೆ ಆಸ್ತಿಯನ್ನು ಹೊಂದಬಹುದೆಂಬುದನ್ನು ನ್ಯಾಯಾಲಯದ ಮುಂದೆ ಸಾಬೀತುಪಡಿಸಿಲ್ಲ. 1ನೇ ವಾದಿ, ಮೃತ ಲೋಕೇಶ, 1ನೇ ಪ್ರತಿವಾದಿ ಹಾಗೂ 2 ಮತ್ತು 3ನೇ ಪ್ರತಿವಾದಿಗಳು ಸರೋಜಮ್ಮನವರೊಂದಿಗೆ ಸಮಾನಾಗಿ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಹಕ್ಕನ್ನು ಹೊಂದಿರುವುದರಿಂದ ಇವರೆಲ್ಲರೂ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ 1/6 ಆಸ್ತಿ ಹಕ್ಕು ಹೊಂದಲು ಅರ್ಹರಿರುತ್ತಾರೆ. ಮೃತ ಲೋಕೇಶ ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲೇ ಮರಣ ಹೊಂದಿದ್ದು, ಅವರ ಹೆಂಡತಿ ಮತ್ತು ಮಕ್ಕಳು 2 ರಿಂದ 4ನೇ ವಾದಿಗಳಾಗಿ ಈ ದಾವೆಯಲ್ಲಿ ಇರುತ್ತಾರೆ. ಅವರುಗಳು ಮೃತ ಲೋಕೇಶನ ಹಿಸ್ಸಾ ಹಕ್ಕನ್ನು ಹೊಂದಲು ಅರ್ಹರಿದ್ದು, ಮೃತ ಲೋಕೇಶನ ಹಿಸ್ಸಾ ಹಕ್ಕಾದ 1/6ರಲ್ಲಿ 2 ರಿಂದ 3ನೇ ಪ್ರತಿವಾದಿಗಳು ಸಮಾನವಾಗಿ 1/18 ಹಿಸ್ಸೆ ಹಕ್ಕು ಹೊಂದಲು ಅರ್ಹರಿರುತ್ತಾರೆ. ಹಾಗೂ 1ನೇ ಪ್ರತಿವಾದಿ ದಾವಾ ವಿಚಾರಣಾ ಕಾಲದಲ್ಲಿ ಮರಣ ಹೊಂದಿದ್ದು, ಅವರ ಕಾನೂನುಬದ್ದ ವಾರಸುದಾರರನ್ನು ಡಿ1(ಎ) ಯಿಂದ (ಸಿ) ಎಂಬುದಾಗಿ ಕಡತದ ಮೇಲೆ ತಂದಿದ್ದು, 1ನೇ ಪ್ರತಿವಾದಿಯು ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ 1/6 ಹಿಸ್ಸೆ ಹಕ್ಕು ಪಡೆದುಕೊಳ್ಳಲು ಅರ್ಹರಿದ್ದಾರೆ ಎಂದು ಈ ನ್ಯಾಯಾಲಯ ತೀರ್ಮಾನಕ್ಕೆ ಬಂದಿರುತ್ತದೆ. ಮೃತ ಯಜೇಂದ್ರಕುಮಾರ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಹೊಂದಿರುವ 1/6 ಹಿಸ್ಸೆಯಲ್ಲಿ ಅವರ ಹೆಂಡತಿ ಮತ್ತು ಮಕ್ಕಳಾದ ಡಿ1 (ಎ) ಯಿಂದ ಡಿ1(ಸಿ)ರವರು 1/6ರಲ್ಲಿ ಪ್ರತಿಯೊಬ್ಬರು ಸಮಾನಾಗಿ 1/18 ಹಿಸ್ಸೆ ಹಕ್ಕು ಹೊಂದಲು ಅರ್ಹರಿರುತ್ತಾರೆ ಎಂದು ಅಭಿಪ್ರಾಯಿಸಿರುತ್ತದೆ. ಈಗ ಮೇಲೆ ವಿವರವಾಗಿ

ಚರ್ಚಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಹಕ್ಕು ಹೊಂದಿದ್ದಾರೆ. ಹಾಗೂ ಪ್ರತಿವಾದಿಗಳು ದಿನಾಂಕ 10/10/1998 ಮತ್ತು ದಿನಾಂಕ 04/06/2004 ಹಾಗೂ 03/07/2001ರಂದು ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ವಿಭಾಗ ಆಗಿದೆ ಎಂದು ಸ್ಪಷ್ಟ ಸಾಕ್ಷ್ಯಾದಾರಗಳನ್ನು ನೀಡಿ ಸಾಬೀತುಪಡಿಸುವಲ್ಲಿ ವಿಫಲರಾಗಿರುವುದರಿಂದ ವಾದಿಗಳು ಮತ್ತು ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಹಿಸ್ಸೆ ಹೊಂದಲು ಅರ್ಹರಿರುತ್ತಾರೆ ಎಂದು ಈ ನ್ಯಾಯಾಲಯ ಈಗಾಗಲೇ ಮೇಲೆ ವಿವರವಾಗಿ ಪಕ್ಷಕಾರರ ಭಾಗಂಶ ಹಕ್ಕನ್ನು ನಿರ್ದರಿಸಿರುವಂತೆ ಉಭಯಪಕ್ಷಕಾರರು ಹೊಂದಲು ಅರ್ಹರಿದ್ದಾರೆ ಎಂದು ತೀರ್ಮಾನಕ್ಕೆ ಬಂದಿರುವುದರಿಂದ ವಾದಿಗಳ ಮೇಲೆ ರಚಿತವಾಗಿರುವ ವಿವಾದಾಂಶ 2ನ್ನು ವಾದಿಗಳು ಸಾಬೀತುಪಡಿಸಲು ವಿಫಲರಾಗಿದ್ದಾರೆ ಎಂದು ಹಾಗೂ ವಾದಿಗಳ ಮೇಲೆ ರಚಿತವಾದ ವಿವಾದಾಂಶ 3ನ್ನು ವಾದಿಗಳು ಅತ್ಯಂತ ಯಶಸ್ವಿಯಾಗಿ ಸಾಬೀತುಪಡಿಸಿದ್ದಾರೆಂದು ಹಾಗೂ ಪ್ರತಿವಾದಿಗಳ ಮೇಲೆ ರಚಿತವಾದ ವಿವಾದಾಂಶ 5ನ್ನು ಪ್ರತಿವಾದಿಗಳು ಸಾಕ್ಷ್ಯಾದಾರಗಳಿಂದ ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಅಭಿಪ್ರಾಯಿಸಿ **ವಿವಾದಾಂಶ 2ಕ್ಕೆ ನಕರಾತ್ಮಕವಾಗಿ, ವಿವಾದಾಂಶ 3ಕ್ಕೆ ಸಕರಾತ್ಮಕವಾಗಿ ಮತ್ತು ವಿವಾದಾಂಶ 5ಕ್ಕೆ ನಕರಾತ್ಮಕವಾಗಿ ಉತ್ತರಿಸಿರುತ್ತೇನೆ.**

16. **ವಿವಾದಾಂಶ-6**: ವಿವಾದಾಂಶ 1 ರಿಂದ 5ರಲ್ಲಿ ವಿವರವಾಗಿ ಚರ್ಚಿಸಿರುವ ಕಾರಣಗಳಿಂದ ಈ ಕೆಳಕಂಡಂತೆ ಅಂತಿಮ ಆದೇಶದಂತೆಃ

## ಆದೇಶ

ವಾದಿಗಳು ಸಲ್ಲಿಸಿರುವ ದಾವೆಯನ್ನು ಭಾಗಶಃ ಡಿಕ್ರಿಗೊಳಿಸಲಾಗಿದೆ.

ತತ್ಪರಿಣಾಮವಾಗಿ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ 1ನೇ ವಾದಿ ಮೃತ ಲೋಕೇಶ, ಮೃತ 1ನೇ ಪ್ರತಿವಾದಿ ಯಜೇಂದ್ರಕುಮಾರ, 2 ರಿಂದ 3ನೇ ಪ್ರತಿವಾದಿಗಳು ಹಾಗೂ 2ನೇ ಹೆಂಡತಿ ಸರೋಜಮ್ಮ ತಲಾ 1/6ನೇ ಹಿಸ್ಸೆ ಹಕ್ಕನ್ನು ಹೊಂದಲು ಅರ್ಹರಿರುತ್ತಾರೆ.

ಮುಂದುವರೆದು ಆದೇಶಿಸಿರುವುದೇನೆಂದರೆ ಮೃತ ಲೋಕೇಶನ ವಾರಸುದಾರರಾದ ವಾದಿ 2 ರಿಂದ 4ರವರು ತಮ್ಮ ಗಂಡ ಮತ್ತು ತಂದೆಯ ಭಾಗವಾದ 1/6 ಹಿಸ್ಸೆಯಲ್ಲಿ 1/18 ಹಿಸ್ಸೆ ಹೊಂದಲು ಅರ್ಹರಿರುತ್ತಾರೆ.

ಮುಂದುವರೆದು ಆದೇಶಿಸಿರುವುದೇನೆಂದರೆ ಮೃತ ಯಜೇಂದ್ರಕುಮಾರವರ ವಾರಸುದಾರರಾದ ಡಿ1(ಎ) ರಿಂದ (ಸಿ)ರವರು ತಮ್ಮ ತಂದೆಯ ಹಿಸ್ಸೆ ಹಕ್ಕಾದ 1/6ರಲ್ಲಿ 1/18ನೇ ಹಿಸ್ಸೆ ಹಕ್ಕು ಹೊಂದಲು ಅರ್ಹರಿರುತ್ತಾರೆ.

ತತ್ಪರಿಣಾಮವಾಗಿ ಮುಂದುವರೆದು ಆದೇಶಿಸಿರುವುದೇನೆಂದರೆ 3ನೇ ಪ್ರತಿವಾದಿಯು 1ನೇ ಪ್ರತಿವಾದಿ ಹೆಸರಿಗೆ ಮಾಡಿರುವ ನಿಡಿ 4 ಮತ್ತು 5ರ ಕ್ರಯಪತ್ರ ವಾದಿಗಳು ಮತ್ತು ಪ್ರತಿವಾದಿಗಳ ಭಾಗಂಶ ಹಕ್ಕಿಗೆ ಬದ್ದಪಡಿಸುವುದಿಲ್ಲ ಎಂದು ಘೋಷಿಸಲಾಗಿದೆ.

ದಾವೆಯ ವಸ್ತು ಸ್ಥಿತಿ ಮತ್ತು ಪಕ್ಷಕಾರರ ರಕ್ತ ಸಂಬಂಧವನ್ನು ಪರಿಗಣಿಸಿ, ಸ್ವತಃ ಪಕ್ಷಕಾರರೇ ದಾವೆಯ ಖರ್ಚನ್ನು ಭರಿಸಿಕೊಳ್ಳತಕ್ಕದ್ದು.

ಈ ಮೇಲಿನಂತೆ ಪ್ರಾರಂಭಿಕ ಡಿಕ್ರಿ ರಚಿಸಲು ಕಛೇರಿಗೆ ಆದೇಶಿಸಿರುತ್ತದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಅದನ್ನು ಅವರು ಅನುವಾದಿಸಿ ಬೆರಳಚ್ಚು ಮಾಡಿದ್ದನ್ನು ತಿದ್ದಿ ಪರಿಷ್ಕರಿಸಿ ನಂತರ ದಿನಾಂಕ 17ನೇ ಜೂನ್ ಮಾಹೆ 2019ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಆರ್. ಮಹೇಶ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಹೊಳೆನರಸೀಪುರ

## ಃ ಅನುಬಂಧ ಃ

1) ವಾದಿಯ ಪರ ವಿಚಾರಣೆಯಾದ ಸಾಕ್ಷಿದಾರರು ಃ-

ಪಿ.ಡಬ್ಲ್ಯೂ-1 ಃ ಮಂಜುಳ

2) ವಾದಿಯ ಪರ ಗುರುತು ಮಾಡಲಾದ ದಾಖಲೆಗಳುಃ-

ನಿಪಿ-1 ರಿಂದ 11 ಃ ಪಹಣಿ ಪತ್ರಿಕೆಗಳು

3) ಪ್ರತಿವಾದಿಗಳ ಪರ ವಿಚಾರಣೆಯಾದ ಸಾಕ್ಷಿಗಳು

ಡಿ.ಡಬ್ಲ್ಯೂ-1 ಃ ಅರುಣ್‌ಕುಮಾರ

ಡಿ.ಡಬ್ಲ್ಯೂ-2 ಃ ಈಶ್ವರ

4) ಪ್ರತಿವಾದಿಗಳ ಪರ ಗುರುತಿಸಲಾದ ದಾಖಲೆಗಳುಃ-

ನಿಡಿ-1 ಮತ್ತು 2ಃ ಪಹಣಿ ಪತ್ರಿಕೆಗಳು

ನಿಡಿ-3 ಃ ಮ್ಯುಟೇಷನ್ ವಹಿಗಳು

ನಿಡಿ-4 ಮತ್ತು 5ಃ ದಿನಾಂಕ 6l5/2003ರ ಕ್ರಯಪತ್ರದ ದೃಡಿಕೃತ ನಕಲು

ನಿಡಿ-6 ಮತ್ತು 7ಃ ಕಂದಾಯ ರಶೀದಿಗಳು

ನಿಡಿ-8 ಃ ಹಿಡುವಳಿ ಪತ್ರ

ನಿಡಿ-9 ಮತ್ತು 10ಃ ಪಟ್ಟಾ ಪುಸ್ತಕ

**(ಆರ್. ಮಹೇಶ)**

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಹೊಳೆನರಸೀಪುರ